g) what action has been taken by the Government to release the compensation of Rs. 50,000/– to missing person's family during the communal riots in the State; (three of them in Channapatna Taluk);

h) when all the above matters will be cleared; Definite time limit may be given

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ವಿವರಗಳನ್ನು ಕಲೆ ಹಾಕುತ್ತಿದ್ದೇನೆ. ಅದನ್ನು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ವಿಧಾನಸಭಾ ಸದಸ್ಯರಾದ ಶ್ರೀ ನಾರಾಯಣರಾವ್ ಮನಹಳ್ಳಿಯವರನ್ನು ದಿನಾಂಕ 21–2–1993ರಂದು 4.15 ಗಂಟೆಗೆ ಬೀದರ್ ಟೌನಿನ ಕೆ.ಇ.ಬಿ. ಕಾಲೋನಿಯಲ್ಲಿ ಸಿ.ಆರ್.ಪಿ.ಸಿ. ಕಾಯಿದೆಯ 144ನೇ ಕಲಮಿನ ಮೇರೆಗೆ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದರಿಂದ ಅವರನ್ನು ಬಂಧಿಸಿ ಭಾರತ ದಂಡ ಸಂಹಿತೆಯ 188ರ ಕಲಮಿನ ಮೇರೆಗೆ ಮೊಕದ್ದಮೆಯನ್ನು ದಾಖಲು ಮಾಡಿ ಪೋಲೀಸ್ ಕಸ್ಟಡಿಯಲ್ಲಿಡಲಾಗಿದೆಯೆಂದು ಬೀದರಿನ ಜಿಲ್ಲಾ ಪೊಲೀಸ್ ಅಧಿಕಾರಿಯವರಿಂದ ಸಂದೇಶ ಬಂದಿರುತ್ತದೆ. ಹಾಗೂ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ರುಕ್ಮಯ್ಯ ಪೂಜಾರಿಯವರುಗಳನ್ನು ದಿನಾಂಕ 22–2–1993ರಂದು ಸಂಜೆ 6.15ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಸಿ.ಆರ್.ಪಿ.ಸಿ.ಯ ಕಾಯಿದೆ 151 ಮತ್ತು 107ರ ಕಲಂಗಳ ಮೇರೆಗೆ ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆಯೆಂದು ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಕೆಂಗೇರಿ ಗೇಟ್ ಪೊಲೀಸ್ ಠಾಣೆ, ಬೆಂಗಳೂರು ಸಿಟಿ ಇವರಿಂದ ಸಂದೇಶ ಬಂದಿರುತ್ತದೆ.

ಶ್ರೀ ಅಜೀಜ್ ಸೇಠ್:– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಒಂದು ಸ್ಟೇಟ್‌ಮೆಂಟನ್ನು ಮಾಡಬೇಕು.

Mr. SPEAKER:– I am getting it examined.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ನಾನು ವಂದನಾಪೂರ್ವಕವಾದ ಬೆಂಬಲವನ್ನು ಸೂಚಿಸುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರಪ್ರಥಮವಾಗಿ ಡಿಸೆಂಬರ್ 6ನೇ ತಾರೀಖಿನ ದಿನ ಮತ್ತು ತದ ನಂತರ ರಾಷ್ಟ್ರಾದ್ಯಂತ ಮತ್ತು ರಾಜ್ಯದಾದ್ಯಂತ ಏನು ಕೋಮು ಗಲಭೆಗಳು ನಡೆಯಿತು, ಅಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆಯವರಿಂದ ಶಾಂತಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಆಯಿತು ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಅದೇ ಸಮಯದಲ್ಲಿ ನೊಂದವರಿಗೆಲ್ಲ ಸೂಕ್ತ ಪರಿಹಾರವನ್ನು ಕೂಡ ಕೊಟ್ಟಾಗಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಆದರೆ ಅದೇ ಸಮಯದಲ್ಲಿ, ಕೋಮು ಗಲಭೆಯನ್ನು ತಡೆಗಟ್ಟುವಂತಹದರಲ್ಲಿ ಲಕ್ಷಾಂತರ ಸಾರ್ವಜನಿಕರು ಶಾಂತಿಪ್ರಿಯರಾಗಿ, ಜಾತ್ಯಾತೀತರಾಗಿ ಪೊಲೀಸರೊಂದಿಗೆ ಸಾಕಷ್ಟು ಸಹಕಾರವನ್ನು ಕೊಟ್ಟು ತಡೆ ಹಾಕಿದರು ಎನ್ನುವ ಮಾತನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತೆಂದು ನಾನು ಭಾವಿಸುತ್ತೇನೆ. ಏಕೆ ಶಾಂತಿ ಪ್ರಿಯ, ಜಾತ್ಯಾತೀತ ಶೇಕಡಾ 80 ಭಾಗ ಜನತೆಯ ಮೇಲೆ ಆ ವಿಶ್ವಾಸ, ಅಭಿಮಾನ

ತೋರಿಸಲಿಲ್ಲ. ಅವರನ್ನು ಅಭಿನಂದಿಸಲಿಲ್ಲ ಎನ್ನುವುದು ನನಗೆ ಆಶ್ಚರ್ಯ ಎನಿಸುತ್ತಿದೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕಾಗುತ್ತದೆ. ಹಿಂದೆ ಸಾಕಷ್ಟು ಸರ್ಕಾರಗಳು ಮತ್ತು ಮಾನ್ಯ ವೀರೇಂದ್ರಪಾಟೀಲರ ಕಾಲದಲ್ಲಿಯೂ ಕೂಡ ಕೋಮು ಗಲಭೆಗಳು ಆಗುವುದಕ್ಕೆ ಅಲ್ಲಿನ ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆಗಲಿ, ಡೆಪ್ಯುಟಿ ಕಮೀಷನರ್ ಆಗಿರಲಿ ಅವರನ್ನೂ ಜವಾಬ್ದಾರರನ್ನಾಗಿ ಮಾಡುತ್ತೇವೆಂದು ಜವಾಬ್ದಾರಿ ಹೊರಿಸುತ್ತೇವೆಂದು ಹೇಳಿದ್ದರು. ಮೊನ್ನೆ ನಡೆದ ಕೋಮು ಗಲಭೆಯಲ್ಲಿ ಇಂತಹ ಒಂದು ತೀವ್ರವಾದ ಘಟನೆ ಆಗಿದ್ದರೂ ಕೂಡ ಯಾವುದೇ ಒಂದು ಪೊಲೀಸ್ ಅಧಿಕಾರಿಯಾಗಲೀ ಅಥವಾ ಜಿಲ್ಲಾಧಿಕಾರಿ ಆಗಲಿ ಯಾವುದೇ ರೀತಿಯಾದ ಒಂದು ಜವಾಬ್ದಾರಿಯನ್ನು ಕೂಡ ಅವರ ಮೇಲೆ ಹೇರಲಿಲ್ಲ, ಅವರ ವಿಷಯವಾಗಿ ಯಾವುದೇ ಒಂದು ಕ್ರಮವನ್ನು ಕೂಡ ತೆಗೆದುಕೊಳ್ಳಲಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ನಮ್ಮ ರಾಜ್ಯಮಟ್ಟದಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಈ ಕೋಮು ಗಲಭೆ ಆಗುವುದಕ್ಕೆ ಮುಂಚಿತವಾಗಿ ಸಾಕಷ್ಟು ಮಾಹಿತಿಗಳನ್ನು ಪಡೆದು ಮುನ್ನೆಚ್ಚರಿಕೆಯಾಗಿ ಸರ್ಕಾರಕ್ಕೂ ಮತ್ತು ಪೋಲೀಸ್ ಇಲಾಖೆಯವರಿಗೆ ಕೊಡಬೇಕಾಗಿದ್ದು ಅತ್ಯಾವಶ್ಯಕ ಆಗಿತ್ತು.

ಈ ಕೆಲಸದಲ್ಲಿ ಬಹಳ ವಿಫಲರಾಗಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬಯಸುತ್ತೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಈ ಸದನಕ್ಕೆ ತಿಳಿಸಬೇಕೆಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಸ್ಪೆಷಲ್ ಆಕ್ಷನ್ ಫೋರ್ಸ್ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಇಂತಹ ಗಲಭೆಗಳನ್ನು ಎದುರಿಸುವುದಕ್ಕೋಸ್ಕರ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ. ನಾನಾದರೂ ಹೇಳಬಯಸುತ್ತೇನೆ, ಇಂತಹ ದುರ್ಘಟನೆ ಆದ ಮೇಲೆ ಕ್ರಮ ವಹಿಸುವುದು ಬಹಳ ಸುಲಭ. ಆದರೆ ದುರ್ಘಟನೆ ಆಗದ ರೀತಿಯಲ್ಲಿ ಕ್ರಮ ವಹಿಸಬೇಕಾಗಿದ್ದು ಅತ್ಯಾವಶ್ಯಕ. prevention is better than cure ಎಂದು ಹೇಳುತ್ತಾರೆ. ಆ ಕೆಲಸವನ್ನು ನಮ್ಮ ಸರ್ಕಾರದವರು ಮಾಡಬೇಕಾದದ್ದು ಅತ್ಯಾವಶ್ಯಕ. ಇನ್ನೊಂದು ವಿಷಯವನ್ನು ಮುಖ್ಯವಾಗಿ ಹೇಳಬಯಸುವುದೇನೆಂದರೆ, ನನಗೆ ಆದ ಒಂದು ಅನುಭವ ಹೇಳುತ್ತೇನೆ. ನಮ್ಮ ಪೊಲೀಸ್ ಇಲಾಖೆಯಲ್ಲಿ ಜಾತ್ಯಾತೀತ ಮನೋಭಾವನೆವುಳ್ಳಂತಹ ಒಂದು ಪೊಲೀಸ್ ಫೋರ್ಸ್ ಇಲ್ಲ. ಅವರು ಪಕ್ಷಪಾತದ ದೃಷ್ಟಿಯಲ್ಲಿ ಸಾರ್ವಜನಿಕರನ್ನು ಗಮನಿಸುತ್ತಾರೆ ಎನ್ನುವುದು ಒಂದು ಮತ್ತು ಇಂತಹ ಸಂದರ್ಭಗಳಲ್ಲಿ ಜಾತಿ ಮನೋಭಾವನೆಯನ್ನು ಇಟ್ಟುಕೊಂಡು ಒಂದು ಜಾತಿಯವರು ಮತ್ತೊಂದು ಜಾತಿಯವರ ಮೇಲೆ ಮಾಡಬಾರದಂತಹ ಅಕ್ರಮಗಳನ್ನೆಲ್ಲ ಮಾಡುತ್ತಾರೆ ಎನ್ನುವಂತಹ ನಿದರ್ಶನಗಳು ನನಗೆ ಸಾಕಷ್ಟು ಬಂದಿದೆ. ಶಿವಾಜಿನಗರ ಕ್ಷೇತ್ರದಲ್ಲಿ ನಡೆದಂತಹ ಗಲಭೆಗಳ ಸಮಯದಲ್ಲಿ ನಾನು ನೋಡಿದ್ದೇನೆ. ಆ ರೀತಿ ಆಗದ ರೀತಿಯಲ್ಲಿ ಪೊಲೀಸ್ ಫೋರ್ಸ್‌ನ್ನು ಒಂದು ಸೆಕ್ಯುಲರ್ ಫೋರ್ಸ್ ಆಗಿ ತರಬೇತಿ ಕೊಡುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಎಂದಿನವರೆಗೆ ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಿಕೊಳ್ಳುವಂತಹ ಪೊಲೀಸ್ ಫೋರ್ಸ್ ಇರುವುದಿಲ್ಲ ಅಲ್ಲಿಯವರೆಗೆ ಪೊಲೀಸರಿಂದ ನ್ಯಾಯ ದೊರಕಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಗಲಭೆಗಳು ಕಡಿಮೆ ಆಗುವುದಕ್ಕಿಂತ ಹೆಚ್ಚಾಗಿ ದುರ್ಘಟನೆಗಳು ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಹೆಣ್ಣುಮಕ್ಕಳಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಸ್ಪೆಷಲ್ಲಾಗಿ ಪೊಲೀಸ್ ಠಾಣೆಯನ್ನು ಪ್ರಥಮತಃ ಬೆಂಗಳೂರಿನಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಮಾತ್ರ ಅಲ್ಲ, ಎಲ್ಲ ಜಿಲ್ಲಾ ಮುಖ್ಯ ನಗರಗಳಲ್ಲಿಯೂ ಮಾಡುತ್ತೇವೆ ಎನ್ನತಕ್ಕ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕೆ ನನ್ನ ವಂದನೆಗಳು. ಆದರೆ ಸ್ಪೆಷಲ್ ಪೊಲೀಸ್ ಸ್ಟೇಷನ್ ಎನ್ನುವುದಕ್ಕಿಂತ ಹೆಚ್ಚಾಗಿ ಹೆಣ್ಣು ಮಕ್ಕಳನ್ನು

ಪೊಲೀಸ್ ಇಲಾಖೆಯಲ್ಲಿ ತಯಾರು ಮಾಡಿ ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲಿಯೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ಪ್ರಭಾವಿತ ಪೊಲೀಸ್ ಹೆಣ್ಣು ಮಕ್ಕಳ ಅಧಿಕಾರಿಗಳನ್ನು ನೇಮಿಸುವುದು ಬಹಳ ಅತ್ಯಾವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ ರಾಜ್ಯಪಾಲರ ಭಾಷಣದಲ್ಲಿ ರಾಜ್ಯಪಾಲರೇ ಹೇಳಿದ್ದಾರೆ. ಪೊಲೀಸ್ ಸ್ಟೇಷನ್ನಿಗೆ ಹೋಗುವುದಕ್ಕೆ ಹೆಣ್ಣು ಮಕ್ಕಳು ಬಹಳ ಭಯಪಡುತ್ತಾರೆ, ಆದಕಾರಣ ನಾವು ಹೆಣ್ಣು ಮಕ್ಕಳಿಗೆ ಸ್ಪೆಷಲ್ ಪೊಲೀಸ್ ಸ್ಟೇಷನ್ ಮಾಡುತ್ತೇವೆಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ಪೊಲೀಸ್ ಸ್ಟೇಷನ್ ಸ್ಪೆಷಲ್ ಆಗಿ ಇರುವ ಜಾಗ ಬಿಟ್ಟರೆ ಉಳಿದ ಕಡೆ ಹೆಣ್ಣು ಮಕ್ಕಳು ಭಯಪಡುವವರು ಸ್ಟೇಷನಿಗೆ ಹೋಗುವುದಿಲ್ಲ. ಅದಕ್ಕೆ ಯಾವ ರೀತಿ ಪರಿಹಾರವನ್ನು ಕೊಡಬೇಕು ಎನ್ನುವುದನ್ನು ತೀವ್ರವಾಗಿ ನಾವು ಯೋಚನೆಯನ್ನು ಮಾಡಬೇಕಾಗಿದ್ದರೆ, ಹೆಚ್ಚು ಹೆಚ್ಚು ಹೆಣ್ಣು ಮಕ್ಕಳಿಗೆ ತರಬೇತಿಯನ್ನು ಕೊಟ್ಟು ಸ್ಟೇಷನ್‌ನಲ್ಲಿ ನೇಮಕ ಮಾಡುವುದು ಅತ್ಯಾವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ. ಅದಕ್ಕಿಂತ ಹೆಚ್ಚಾಗಿ ಹೆಣ್ಣು ಮಕ್ಕಳ ಮೇಲೆ ಈ ಸಮಾಜದಲ್ಲಿ ಅತ್ಯಾಚಾರಗಳು ಆಗುತ್ತಿವೆ; ಆ ಅತ್ಯಾಚಾರಗಳನ್ನು ತಡೆಯುವುದಕ್ಕೆ ಪ್ರತಿಯೊಂದು ಸಂದರ್ಭದಲ್ಲಿಯೂ ಪೊಲೀಸಿನವರಿಂದ ರಕ್ಷಣೆ ಸಿಗುವುದು ಕಷ್ಟವಾಗುತ್ತದೆ. ಬಹಳ ದೂರದೂರದ ಜಾಗದಲ್ಲಿ ಘಟನೆ ಆಗುತ್ತಿರಬೇಕಾದರೆ ಘಟನೆ ಮುಗಿದ ನಂತರ ಪೊಲೀಸ್‌ನವರ ಸಹಾಯ ಸಹಕಾರ ಸಿಗುವುದಕ್ಕೆ ಅವಕಾಶವಿದೆಯೇ ಹೊರತು ಘಟನೆ ನಡೆಯದೆ ಇರುವ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೆಣ್ಣು ಮಕ್ಕಳಿಗೆ ತೀವ್ರ ರೀತಿಯಲ್ಲಿ ಕರಾಟೆ, ಕುಂಗ್‌ಫೂ ಮತ್ತು ಕಲ್ಲರಿ ಫೈಟ್ ತರಬೇತಿಯನ್ನು ಕೊಟ್ಟು ಅವರು ಅವರನ್ನೇ ರಕ್ಷಣೆ ಮಾಡಿಕೊಳ್ಳುವಂತಹ ಸಹಾಯವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಾವು ಮುಖ್ಯಮಂತ್ರಿಗಳಾಗುವುದಕ್ಕಿಂತ ಮುಂಚೆ ಹಿಂದಿನ ಆಡಳಿತದಲ್ಲಿ ಒಂದು ಮೇಜರ್ ಸರ್ಜರಿ ಆಗಬೇಕೆಂದು ಹೇಳಿ ಮತ್ತೆ ಈ ಸರ್ಕಾರ ಬಂದಾದ ಮೇಲೆ ಮೇಜರ್ ಸರ್ಜರಿ ಮಾಡುತ್ತೇವೆಂದು ಹೇಳಿರುವುದನ್ನು ಅನಾವಶ್ಯಕವಾಗಿ ತಪ್ಪು ಕಲ್ಪನೆಗಳಿಗೆ ತಪ್ಪು ಅಭಿಪ್ರಾಯಗಳಿಗೆ ಮಾತು ಬರುತ್ತಿದೆ ಎನ್ನುವಂತಹ ಭಾವನೆ ಬಂದಿದೆ. ಆ ತಪ್ಪು ಭಾವನೆ, ತಪ್ಪು ಕಲ್ಪನೆ ಏನು ಬರುತ್ತಿದೆ ಅದನ್ನು ದೂರ ಮಾಡುವಂತಹ ಪ್ರಯತ್ನವನ್ನು ಮುಖ್ಯಮಂತ್ರಿಗಳು ಮಾಡಿ ಈ ಸದನಕ್ಕೆ ಈ ನಮ್ಮ ರಾಜ್ಯದ ಜನತೆಗೆ ತಿಳಿಸಬೇಕು. ಆ ಮೇಜರ್ ಸರ್ಜರಿ ಏನು ? ಯಾವ ರೀತಿ, ಯಾವ್ಯಾವ ಕಡೆ, ಯಾವ ತರಹ ನಡೆಯುತ್ತದೆ, ಅದರಿಂದ ಜನಕ್ಕೆ ಏನು ಒಳ್ಳೆಯ ಆಡಳಿತ ಸಿಗುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಪರಿಣಾಮಕಾರಿಯಾಗಿ ತಿಳುವಳಿಕೆಯನ್ನು ಕೊಡುವಂತಹ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ನನಗೆ ಗೊತ್ತಿದೆ ಸರ್ಜನ್ ಅಂದ ಮೇಲೆ ಜನಕ್ಕೆಲ್ಲ ತಿಳಿಯುವ ರೀತಿಯಲ್ಲಿ ಸರ್ಜರಿ ಮಾಡುವುದಿಲ್ಲ. ಯಾವ ಸಮಯದಲ್ಲಿ ಎಲ್ಲಿ ಯಾವ ತರಹ ಸರ್ಜರಿ ಮಾಡಬೇಕು, ಆಪರೇಷನ್ ಥಿಯೇಟರಿನಲ್ಲಿ ಮಾಡುವಂತಹ ಕೆಲಸ ಮಾಡುತ್ತಾರೆ. ಮುಖ್ಯಮಂತ್ರಿಗಳು ಆ ಕೆಲಸವನ್ನು ಮಾಡುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಸರ್ಜನ್ ಸರ್ಜರಿ ಮಾಡಿದ ಮೇಲೆ ಪೇಷೆ ಬದುಕಿದ್ದಾನೆಯೋ ಸತ್ತಿದ್ದಾನೆಯೋ, ಗುಣಮುಖ ಹೊಂದಿದ್ದಾನೆಯೋ ಎನ್ನುವುದು ಜನತೆಗ ಗೊತ್ತಾಗುತ್ತದೆ. ಅದೇ ರೀತಿಯಾಗಿ ರಾಜ್ಯದ ನಾಗರೀಕರಿಗೆ ಯಾವ ತರಹ ಸರ್ಜರಿ ಮಾಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ ಎನ್ನುವುದು ಜನತೆಗೆ ಅಚ್ಚರಿಯಾಗುವ ರೀತಿಯಲ್ಲಿ ಅದರ ಕ್ರಮದ ವಿವರವನ್ನು ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಸರ್ಜರಿ ಮಾಡುವಂತಹ ಕಾರ್ಯಕ್ರಮದಲ್ಲಿ ಹಿಂದೆ ಯಾರ್ಯಾರೂ ಯಾವ್ಯಾವ ಆಡಳಿತ ವರ್ಗ ಏನು ತಪ್ಪು ಮಾಡಿದೆ ಅದರ ಮೇಲೆ ಏನು ಕ್ರಮ ವಹಿಸಬೇಕು ಎನ್ನುವಾಗ ತೀವ್ರವಾದಂತಹ ಅಕ್ರಮಗಳನ್ನು ನಡೆಸಿದಂತಹ ಐ.ಎ.ಎಸ್. ಆಫೀಸರ್ ಆಗಲಿರಲಿ, ಕೆ.ಎ.ಎಸ್. ಆಫೀಸರ್ ಆಗಿರಲಿ, ಉದಾಹರಣೆಗಾಗಿ ಬಿ.ಡಿ.ಎ.ನಲ್ಲಿ ಕೆ.ಇ.ಬಿ.ಯಲ್ಲಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಏನು ಅಕ್ರಮ ನಡೆದು ಹೋಗಿದೆ, ನೂರಾರು ಕೋಟಿ ರೂಪಾಯಿಗಳ

ದುರುಪಯೋಗವಾಗಿದೆ, ಅನ್ಯಾಯವಾಗಿದೆ, ಪೋಲಾಗಿದೆಯೋ, ಆ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ತರಹದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ಜನರು ನಿರೀಕ್ಷಿಸುತ್ತಿದ್ದಾರೆ. ಆ ರೀತಿ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಹಣ ದುರುಪಯೋಗವಾಗಿರುವ ವಿಷಯ ಎಲ್ಲರಿಗೂ ಗೊತ್ತಿದೆ. ಅದಕ್ಕಾಗಿ ಇವೊತ್ತು ಬೆಂಗಳೂರು ನಗರದಲ್ಲಿ ಯಾವುದೇ ಒಂದು ಪೌರ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳು ನಡೆಯುತ್ತಿಲ್ಲ, ಹಣದ ಕೊರತೆಯಿರುವುದರಿಂದ ಕಾರ್ಯಕ್ರಮಗಳು ನಡೆಯುತ್ತಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ತಾವು ಈಗಲಾದರೂ ಯಾವ ರೀತಿ ತೀವ್ರ ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ವಿವರಣೆ ಕೊಡುವುದು ಸೂಕ್ತವೆಂದು ಹೇಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಎಚ್. ಕೌಜಲಗಿಯವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನನಗೆ ಒಂದು ಶಂಕೆ ಏನೆಂದರೆ ಒಬ್ಬ ಐ.ಎ.ಎಸ್. ಅಧಿಕಾರಿ ಒಂದು ಅಕ್ರಮ ಮಾಡಿದ್ದರೆ ಮತ್ತೊಬ್ಬ ಐ.ಎ.ಎಸ್. ಅಧಿಕಾರಿ ಆ ಅಕ್ರಮವನ್ನು ಮುಚ್ಚಿಡುವ ಪ್ರಯತ್ನ ನಡೆಸಿ ಅಕ್ರಮ ಮಾಡಿದಂಥ ಐ.ಎ.ಎಸ್. ಅಧಿಕಾರಿಗಳ ಮೇಲೆ ಮೇಲಿರುವ ಐ.ಎ.ಎಸ್. ಅಧಿಕಾರಿಗಳು ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನ ಇದುವರೆವಿಗೂ ಮಾಡಿದಂತೆ ಕಾಣುತ್ತಿಲ್ಲ. ಈ ರೀತಿಯ ವ್ಯವಸ್ಥೆಯಾದರೆ ಜನರಿಗೆ ಒಳ್ಳೆಯ ಆಡಳಿತ ಕೊಡುವುದಕ್ಕಾಗುತ್ತದೆಯೇ ? ವಿಶ್ವಾಸಭರಿತವಾದಂಥ ಆಡಳಿತ ಕೊಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನಂತರ ಲೋಕಾಯುಕ್ತರ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಸದನದಲ್ಲಿ ಬಹುತೇಕ ಮಾನ್ಯ ಸದಸ್ಯರುಗಳಿಗೆ ಲೋಕಾಯುಕ್ತದ ಮೇಲೆ ವಿಶ್ವಾಸವಿಲ್ಲವೆಂದು ನಾನು ಹೇಳುತ್ತೇನೆ, ಈಗಲೂ ಪದೇ ಪದೇ ಹೇಳುತ್ತಿದ್ದೇನೆ. ಸದನದ ಬಹುತೇಕ ಸದಸ್ಯರುಗಳು ವರ್ಷ ವರ್ಷ ತಮ್ಮ ಆಸ್ತಿ–ಪಾಸ್ತಿಗಳ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸುತ್ತಿಲ್ಲ. ಕಾರಣ, ಅವರಿಗೆ ಲೋಕಾಯುಕ್ತದ ಮೇಲೆ ಸ್ವಲ್ಪವೂ ಗೌರವ, ನಂಬಿಕೆ, ವಿಶ್ವಾಸವಿಲ್ಲವೆಂದು ಕಾಣುತ್ತದೆ. ನಾನಂತೂ ನನ್ನ ಆಸ್ತಿ–ಪಾಸ್ತಿಗಳ ವಿವರಗಳನ್ನು ಲೋಕಾಯುಕ್ತಕ್ಕೆ ಸೂಕ್ತ ಸಮಯದಲ್ಲಿ ಕೊಟ್ಟಿದ್ದೇನೆ. ನನ್ನ ಆಸ್ತಿ–ಪಾಸ್ತಿಗಳ ವಿವರಗಳನ್ನು ಸಲ್ಲಿಸಿದ ನಂತರವೂ ನನಗೆ ಅನಾವಶ್ಯಕವಾಗಿ ಗೊಂದಲವೆಬ್ಬಿಸುವ ರೀತಿಯಲ್ಲಿ ಲೋಕಾಯುಕ್ತದವರು ನನಗೆ ತೊಂದರೆ ಕೊಟ್ಟಿದ್ದರು. ಇದರ ಬಗ್ಗೆ ನಾನು ತೀವ್ರವಾಗಿ ಪ್ರತಿಭಟಿಸಿದ ನಂತಗ ಅವರು ಒಪ್ಪಿಕೊಂಡರು. ಆಸ್ತಿ–ಪಾಸ್ತಿಗಳ ಸತ್ಯಾಂಶ ಆಧರಿಸಿದ ವಿವರಗಳನ್ನು ಕೊಟ್ಟರೂ ಸಹ ಆ ವಿವರಗಳು ಸರಿಯಿಲ್ಲವೆಂದು ಲೋಕಾಯುಕ್ತದವರು ಹೇಳಬೇಕಾದರೆ ರಾಜ್ಯದ ಜನತೆಗೆ ನಂಬಿಕೆಗೆ ಅರ್ಹವಾದಂಥ ಒಳ್ಳೆಯ ಆಡಳಿತವನ್ನು ಕೊಡುವುದಕ್ಕಾಗುತ್ತದೆಯೆ ? ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನು ಕರಪ್ಟ್ ಪ್ರಾಕ್ಟೀಸ್‌ನ ನೋಡುವ ಸಲುವಾಗಿ ವಿಶೇಷ ನ್ಯಾಯಾಧೀಶರುಗಳ ನೇಮಕ. ಇದರಲ್ಲಿ ಹೆಚ್ಚಾಗಿ ಮೈನರ್ ಅಫೆನ್ಸ್, ಮೈನಲ್ ಪೆನಾಲ್ಟಿ ಹಾಕುವುದಕ್ಕೆ ಶೀಘ್ರವಾಗಿ ನ್ಯಾಯಾಧೀಶರ ನೇಮಕ ಮಾಡಬೇಕೆಂದು ಹೇಳುತ್ತಾರೆ. ಆದರೆ, ಮೇಜರ್ ಅಫೆನ್ಸ್, ಮೇಜರ್ ಪೆನಾಲ್ಟಿಗಳಲ್ಲಿ ಯಾವಾಗ ಕ್ರಮ ಕೈಗೊಳ್ಳುತ್ತಾರೆ ? ಎಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ ? ಕ್ರಮ ತೆಗೆದುಕೊಂಡದ್ದಕ್ಕೆ ಎಷ್ಟು ಮಾಹಿತಿಗಳಿವೆ ? ಮುಂದಕ್ಕೆ ಯಾವ ರೀತಿ ಮಾಡುತ್ತಾರೆ ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಇಲ್ಲದೆ ಹೋದರೆ, ಶುದ್ಧ ಆಡಳಿತ ಕೊಡುತ್ತೇವೆ, ಮೇಜರ್ ಸರ್ಜರಿ ಹಿಂದೆ ಮಾಡಬೇಕಾಗಿತ್ತು. ಈಗ ಮಾಡುತ್ತಿದ್ದೇವೆಂದರೆ ಅರ್ಥಪೂರ್ಣವಾಗಿ ಜನರಿಗೆ ನಂಬಿಕೆ ಬರಲು ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತು ಡೈರೆಕ್ಟರ್

ಜನರಲ್, ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಅಂಡ್ ಟ್ರೈನಿಂಗ್, ಇದು ನಮ್ಮಲ್ಲಿ ಬಹಳ ಕಾಲದಿಂದ ಇದೆ. ಇದರ ಹೆಸರು ನಾಮಕರಣವಾಗಿ ಬದಲಾಗಿರುವುದನ್ನು ಬಿಟ್ಟರೆ ಕಾರ್ಯತಃ ಪರಿಣಾಮಕಾರಿಯಾಗಿ ತರಬೇತಿ ಕೊಡುವಂಥ ಕೆಲಸವನ್ನು ಸರ್ಕಾರದ ಮುಖಾಂತರ ನಡೆದುಕೊಂಡು ಬಂದಿದ್ದೆ. ಆಗಿದ್ದರೆ, ಎಲ್ಲೆಲ್ಲಿ ತರಬೇತಿ ನಿಲ್ಲಿಸಲಾಗಿದೆಯೋ ಅಲ್ಲೆಲ್ಲಾ ತರಬೇತಿ ಕೊಡಲಾಗಿದ್ದರೆ ಪುನಃ ಈ ತರಹ ಹೊಸ ನಾಮಕರಣ ಮಾಡಿ ಮತ್ತೊಂದು ತರಬೇತಿ ಎಂದು ಹೇಳಿ ಜನತೆಯ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತಿದ್ದೇನೆ. ಇದುವರೆಗೆ ಯಾರು ಮಾಡಿಲ್ಲ, ಏತಕ್ಕೆ ಮಾಡಿಲ್ಲವೆಂದು ಹೇಳುವ ಸಂದರ್ಭದಲ್ಲಿ ಯಾವ ಜವಾಬ್ದಾರಿಯುತ ಅಧಿಕಾರಿಯನ್ನು ಆ ಟ್ರೈನಿಂಗ್ ಇನ್ಸ್‌ಟ್ಯೂಷನ್‌ಗೆ ನೇಮಕ ಮಾಡಿದ್ದಾರೋ, ಅವರು ಏಕೆ ಸರಿಯಾಗಿ ಟ್ರೈನಿಂಗ್ ಕೊಟ್ಟಿಲ್ಲವೆನ್ನುವುದರ ಬಗ್ಗೆ ವಿವರಣೆ ಕೊಡುವುದು ಅತ್ಯಾವಶ್ಯಕವಾಗಿದೆ ಮತ್ತು ಯಾರು ಸರಿಯಾಗಿ ಟ್ರೈನಿಂಗ್ ಕೊಡದೆ ಕಮಿಟೆಡ್ ಆಗಿ ಕೆಲಸ ಮಾಡಿಲ್ಲವೊ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 40 ವರ್ಷಗಳ ಮೇಲಾದರೂ ಇನ್ನೂ ನಾವು ತರಬೇತಿ ಕೊಡುತ್ತಿದ್ದೇವೆಂದರೆ ಏನರ್ಥ ? ಈಗ ತರಬೇತಿ ಹೊಂದಿರುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಅವರು ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ? ತರಬೇತಿ ಹೊಂದಿದ ಅಧಿಕಾರಶಾಹಿಗಳು ಕೆಲಸ ಮಾಡುತ್ತಿದ್ದಾರೆಯೇ ಎಂದು ಈ ಸಂದರ್ಭದಲ್ಲಿ ನಾವು ತೀವ್ರತರವಾಗಿ ಯೋಚಿಸಬೇಕಾಗಿದೆ. ಅಲ್ಲದೆ ಈ ಪ್ರೊಫೆಷನಲ್ ಇನ್ಸ್‌ಟಿಟ್ಯೂಷನ್ಸ್ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು, ಸುಪ್ರೀಂ ಕೋರ್ಟ್ ಕೂಡ ಇದರ ಕುರಿತು ಒಂದು ತೀರ್ಪು ಕೊಟ್ಟಿದೆ. ಇದರ ಬಗ್ಗೆ ಒಂದೇ ಒಂದು ಸಣ್ಣ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಏನೆಂದರೆ, ಯಾವ ಕೆಲವು ಮಂತ್ರಿಗಳ ಮೇಲೆ ಅಪಾದನೆಗಳು ಬಂದಿವೆಯೋ, ಯಾರು ಕ್ಯಾಪಿಟೇಷನ್ ಫೀ ಮತ್ತು ವ್ಯಾಪಾರೋದ್ಯಮದಂಥ ಒಂದು ಎಜುಕೇಷನ್ ಇನ್ಸ್‌ಟ್ಯೂಷನ್ ನಡೆಸುತ್ತಿದ್ದಾರೋ, ಅಂತಹವರಿಗೆಲ್ಲಾ ನೇರವಾಗಿ, ಪರೋಕ್ಷವಾಗಿ ಇಲ್ಲವೆ ಪ್ರತ್ಯಕ್ಷವಾಗಿ ತಮ್ಮ ಬೆಂಬಲವನ್ನು ಕೊಡುತ್ತಿರುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ.

ಆ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕು ಮತ್ತು ಯಾರ್‍ಯಾರು ಮಂತ್ರಿಗಳು ಈ ಒಂದು ವಿದ್ಯಾಸಂಸ್ಥೆಗಳ ಜೊತೆಯಲ್ಲಿ ಸಂಬಂಧವನ್ನು ಇಟ್ಟುಕೊಂಡಿದ್ದಾರೋ ಅದನ್ನು ತಕ್ಷಣವೇ ತ್ಯಜಿಸಬೇಕೆಂದು ಹೇಳುತ್ತಿದ್ದೇನೆ ಮತ್ತು ಈ ಸದನದಲ್ಲಿ ಅಂಥವರುಗಳು ನಮಗೂ ಅಂಥ ವಿದ್ಯಾ ಸಂಸ್ಥೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಮತ್ತು ಅದಕ್ಕೆ ಬೆಂಬಲವನ್ನು ಕೊಡುವುದಿಲ್ಲವೆಂದು ಪ್ರತಿಜ್ಞಾಪೂರ್ವವಾಗಿ ಹೇಳಬೇಕಾಗಿರತಕ್ಕದ್ದು ಅತ್ಯವಶ್ಯಕವಾಗಿದೆ.

ಶ್ರೀ ಸಿ. ಬೈರೇಗೌಡ:- ನಮಗೆ ತಾವು ಹೇಳುತ್ತಿರುವ ಅನೇಕ ವಿಚಾರಗಳಲ್ಲಿ ಮಾಹಿತಿ ಇಲ್ಲ. ತಾವು ದಯಮಾಡಿ ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಇಂಥಿಂಥ ಮಂತ್ರಿಗಳ ಪಾಲು ಇಂಥಿಂಥ ವಿದ್ಯಾಸಂಸ್ಥೆಯ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇದೆ ಎಂಬ ಬಗ್ಗೆ ಮಾಹಿತಿಯನ್ನು ತಾವು ಹೇಳಿದರೆ ತಮ್ಮ ಜೊತೆಗೆ ನಾವೂ ಕೂಡ ಧ್ವನಿಗೂಡಿಸಲು ಅವಕಾಶ ಸಿಗುತ್ತದೆ. ಆದುದರಿಂದ ತಾವು ದಯ ಮಾಡಿ ಅದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ತಮಗೆ ಕೃತಜ್ಞನಾಗಿರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಇದು ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಎಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಎಲ್ಲಾ ಸದಸ್ಯರು ಪತ್ರಿಕೆಯನ್ನು ಓದಿರುತ್ತಾರೆ. ನಾನು ನೇರವಾಗಿ ಹೇಳುತ್ತಿದ್ದೇನೆ, ಸುತ್ತಿ

ಬಳಸಿ ಹೇಳುವುದಿಲ್ಲ, ನನಗೆ ಯಾವ ವ್ಯಕ್ತಿಯ ಮೇಲೂ ವೈಷಮ್ಯವಿಲ್ಲ. ಪತ್ರಿಕೆಯಲ್ಲಿ ವರದಿಯಾಗಿದೆ, ಜನತೆಯಲ್ಲಿ ಸಂಶಯ ಬಂದಿದೆ.

ಶ್ರೀ ಸಿ. ಬೈರೇಗೌಡ:- ಈ ರೀತಿಯಾಗಿ ಅರ್ಥಂಬರ್ಥ ಹೇಳುವುದು ಬೇಡ.

ಶ್ರೀ ಎ.ಕೆ. ಅನಂತಕೃಷ್ಣ:- ನಾನು ಹೇಗೆ ಮಾತನಾಡಬೇಕು, ಏನು ಮಾಡಬಾರದು ಎಂಬುದನ್ನು ಕಂಟ್ರೋಲ್ ಮಾಡುವವರು ಅಧ್ಯಕ್ಷರು. ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು.

ಶ್ರೀ ಸಿ. ಬೈರೇಗೌಡ:- ತಮ್ಮಲ್ಲಿ ಮಾಹಿತಿಯನ್ನು ಕೊಡಿ ಎಂದು ವಿನಂತಿ ಮಾಡಿಕೊಂಡೆವು, ಆದರೆ ತಾವು ಅದನ್ನು ಕೊಡದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ, ನಮ್ಮ ವಿನಂತಿಯನ್ನು ತಮ್ಮ ಮುಂದೆ ಇಡುತ್ತಿದ್ದೇವೆ.

ಶ್ರೀ ಎ.ಕೆ. ಅನಂತಕೃಷ್ಣ:- ಈ ವಿಷಯವು ಪತ್ರಿಕೆಯಲ್ಲಿ ವರದಿಯಾಗಿದೆ. ಇದರಿಂದಾಗಿ ಜನರಲ್ಲಿ ಒಂದು ರೀತಿಯ ಸಂಶಯಕ್ಕೆ ಕಾರಣವಾಗಿದೆ. ಆದ್ದರಿಂದ ಸುಪ್ರೀಮ್ ಕೋರ್ಟ್‌ನವರು ಕೊಟ್ಟ ತೀರ್ಮಾನಕ್ಕೆ ಸೂಕ್ತವಾದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕಾಗಿದೆ. ಮಂತ್ರಿಮಂಡಲ ನಡೆದುಕೊಳ್ಳಬೇಕಾಗಿದೆ, ನಮ್ಮ ಸದಸ್ಯರುಗಳು ನಡೆದುಕೊಳ್ಳಬೇಕಾಗಿದೆ ನಾವು ಆ ವಿಷಯದಲ್ಲಿ ಬಹಳ ತೀವ್ರವಾಗಿ ಭಾಗಿಯಾಗಿದ್ದೇವೆಂದು ಹೇಳಬೇಕಾಗಿರತಕ್ಕ ಅತ್ಯವಶ್ಯಕತೆ ಇದೆ. It is a matter of policy, it is a matter of principle; it is a matter of ethics. ಆ ವಿಷಯದಲ್ಲಿ ತೀರ್ಮಾನ ಮಾಡಿಕೊಳ್ಳಿ. details will take care of themselves.....ಇನ್ನು ಎಕ್ಸೈಜ್ ವಿಷಯದ ಬಗ್ಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಮಗೆ ಯಾವ ಎಕ್ಸೈಜ್‌ನ ಲಾಬಿಯೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ಹೇಳುವಾಗ ಮತ್ತು ಅದರೊಂದಿಗೆ ಸಂಬಂಧವಿಲ್ಲದಿದ್ದರೂ ಕೂಡ ಅದರ ನಿಯಂತ್ರಣವು ನಮ್ಮ ಆಡಳಿತದ ಮೇಲೆ ಇಲ್ಲ ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ, ನಿರ್ಧಾರವಾಗಿ ಜನತೆಗೆ ಅರ್ಥವಾಗುವ ರೀತಿಯಲ್ಲಿ ಹೇಳಬೇಕಾಗಿದೆ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ಕನ್‌ಜೆಸ್ಟೆಡ್ ಏರಿಯಾ ಎಂದು ಏನು ಹೇಳುತ್ತೇವೆ Places of worship ಎಂದು ಏನು ಹೇಳುತ್ತೇವೆ. ವಿದ್ಯಾ ಕೇಂದ್ರವೆಂದು ಏನು ಹೇಳುತ್ತೇವೆ, ಸ್ಲಮ್ಸ್ ಎಂದು ಏನು ಹೇಳುತ್ತೇವೆ, ಹರಿಜನ ಗಿರಿಜನರು ವಾಸ ಮಾಡತಕ್ಕ ಸ್ಥಳವೇನಿದೆ, ಯಾವುದೇ ಕುಡಿತದ ಅಭ್ಯಾಸವಿಲ್ಲದೇ ಇರತಕ್ಕ ಮೈನಾರಿಟಿಯ ಜನರು ವಾಸ ಮಾಡತಕ್ಕ ಕನ್‌ಜೆಸ್ಟೆಡ್ ಏರಿಯಾ ಏನು ಇದೆ ಅಂಥ ಕಡೆಗಳಲ್ಲಿ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಸಾರಾಯಿ ಅಂಗಡಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದನ್ನು ತೆಗೆದು ಹಾಕಬೇಕೆಂದು ಜನತೆ ಪದೇ ಪದೇ ಸರ್ಕಾರಕ್ಕೆ ಮೊರೆ ಹೋಗುತ್ತಿದ್ದಾರೆ, ಅಲ್ಲಿಯ ಜನರು ನಮ್ಮಂತಹವರಲ್ಲೂ ಬಹಳ ಹೇಳುತ್ತಿದ್ದಾರೆ. ನಾವೂ ಸಹ ಪದೇ ಪದೇ ಈ ಸದನದಲ್ಲಿ ಅವನ್ನು ತೆಗೆದು ಹಾಕಬೇಕೆಂದು ಹೇಳುತ್ತಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ, ಶಿವಾಜಿನಗರ ವಿಭಾಗದಲ್ಲಿ ಬ್ರಾಡ್‌ವೇ ರೋಡ್‌ನಲ್ಲಿ ಒಂದು ದೊಡ್ಡ ಸಾರಾಯಿ ಅಂಗಡಿ ಇದೆ. ಅದನ್ನು ಇಡೀ ಬೆಂಗಳೂರಿಗೆ ದೊಡ್ಡ ಸಾರಾಯಿ ಅಂಗಡಿ ಎಂದು ಹೇಳುತ್ತಾರೆ. ಅದರ ಸುತ್ತಮುತ್ತ ಚರ್ಚ್‌ಗಳಿವೆ, ದೇವಸ್ಥಾನಗಳು, ಶಾಲೆಗಳು, ಹರಿಜನ ಗಿರಿಜನರು, ಮತ್ತು ಇದನ್ನು ವಿರೋಧ ಮಾಡತಕ್ಕಂಥ ಮುಸಲ್ಮಾನರು ಇದ್ದಾರೆ. ಈ ಅಂಗಡಿಯನ್ನು ಅಲ್ಲಿಂದ ತೆಗೆದು ಹಾಕಬೇಕೆಂದು ನಾವು ಹೋದ ಸಾರಿಯೇ ಹೇಳಿದ್ದೆವು. ಆಗ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಧರ್ಮಸಿಂಗ್‌ರವರು ಅದನ್ನು ಖಂಡಿತಾ ತೆಗೆಸಿ ಹಾಕುತ್ತೇವೆಂದು ಸಾಕಷ್ಟು ಸಾರಿ ಹೇಳಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಹೇಳಿದ್ದೇನೆಂದು ಹೇಳಿದ್ದಾರೆ. ನಾವುಗಳು ಅವರಲ್ಲಿ ಪದೇ ಪದೇ ಅದನ್ನು ತೆಗಿಸಲೇಬೇಕೆಂದು ಹೇಳಿದ್ದೇವೆ. ಹಿಂದೆ ಮಾನ್ಯ ರಘುಪತಿಯವರು ಸದಸ್ಯರಾಗಿದ್ದಾಗ ಒಂದು ಸತ್ಯಾಗ್ರಹವನ್ನು ಮಾಡಿ ಆ ಅಂಗಡಿಯನ್ನು ತೆಗೆಸಿಹಾಕಬೇಕೆಂದು ಹೇಳಿದ್ದರು. ಹೀಗೆ ಹಮೀದ್

ಷಾ, ರೋಶನ್ ಬೇಗಂ ಮುಂತಾದ ಸದಸ್ಯರುಗಳೂ ಸಹ ಹೋರಾಟ ಮಾಡಿದರು. ಆ ಸರ್ಕಾರದಿಂದ ಹಿಡಿದು ಇವತ್ತಿನವರೆಗೂ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಪ್ರತಿಯೊಬ್ಬ ಸದಸ್ಯರು ಹೋರಾಟ ಮಾಡಿದರೂ ಕೂಡ ಇವತ್ತಿನವರೆಗೂ ಆ ಸಾರಾಯಿ ಅಂಗಡಿಯನ್ನು ಅಲ್ಲಿಂದ ತೆಗೆಸಿ ಹಾಕುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಧರ್ಮಸಿಂಗ್‌ರವರು ಹಿಂದೆ ಮಂತ್ರಿಗಳಾಗಿದ್ದಾಗ ಅದನ್ನು ತೆಗೆಸಿ ಹಾಕುವುದರ ಸಲುವಾಗಿ ಸಾಕಷ್ಟು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಕೂಡ ಇದನ್ನು ತೆಗೆದು ಹಾಕಲು ಆಗಿಲ್ಲವೆಂದರೆ ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಶ್ನೆ ಕೇಳಬಯಸುತ್ತೇನೆ. ಈ ಎಕ್ಸೈಜ್ ಲಾಬಿ ಈ ಸರ್ಕಾರವನ್ನು ನಡೆಸುತ್ತಿದ್ದೆಯೊ ಅಥವಾ ಸರ್ಕಾರ ಇದರ ಮೇಲೆ ಯಾವುದಾದರೂ ನಿಯಂತ್ರಣವನ್ನು ಇಟ್ಟುಕೊಂಡಿದೆಯೇ ಎಂಬ ಒಂದು ಸಣ್ಣ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಕನ್‌ಸರ್ನ್ ಡೆಪ್ಯುಟಿ ಕಮೀಷನರ್, ಎಕ್ಸೈಜ್‌ರವರು ಬಂದು ನಿಮ್ಮಲ್ಲಿ ಮಾತನಾಡುತ್ತಾರೆ. ಅದನ್ನು ಆ ಜಾಗದಿಂದ ಶಿಫ್ಟ್ ಮಾಡುತ್ತೇವೆ ಎಂದು ಹೇಳಿದರು ಮತ್ತು ಬೆಂಗಳೂರು ಮಹಾ ನಗರಪಾಲಿಕೆಯವರು ಅದನ್ನು ಶಿಫ್ಟ್ ಮಾಡಲಿಕ್ಕೆ ಎಂದು ಹೇಳಿ ಕಂಟೋನ್‌ಮೆಂಟ್ ರೈಲ್ವೆ ಸ್ಟೇಷನ್ ಹತ್ತಿರ ಒಂದು ನಿವೇಶನವನ್ನು ನಿಗದಿ ಮಾಡಿ ಎಕ್ಸೈಸ್ ಡಿಪಾರ್ಟ್‌ಮೆಂಟ್ ಪೊಜಿಷನ್ ತೆಗೆದುಕೊಳ್ಳುವುದಕ್ಕೆ ಪದೇ ಪದೇ ಅವರ ಬಾಗಿಲಿಗೆ ಹೋಗಿ ಹೇಳುತ್ತಿದ್ದಾರೆ. ಆದರೆ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಇವತ್ತಿನವರೆಗೆ ಆ ನಗರಪಾಲಿಕೆಯ ನಿವೇಶನವನ್ನು ತೆಗೆದುಕೊಂಡು ಬ್ರಾಡ್‌ವೇ ರೋಡಿನಲ್ಲಿರುವ ಲಿಂಕ್ ಶಾಪ್‌ನ್ನು ಶಿಫ್ಟ್ ಮಾಡಲಿಕ್ಕೆ ತಯಾರಾಗಿಲ್ಲ. ಎಕ್ಸೈಸ್ ಡಿಪಾರ್ಟಮೆಂಟ್ ಈ ಎಕ್ಸೈಸ್ ಲಾಬಿ ಏನಿದೆ, ಆ ಕಂಟ್ರಾಕ್ಟರುಗಳಿಗೆ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೋ ಇಲ್ಲವೇ ಎಕ್ಸೈಸ್ ಡಿಪಾರ್ಟ್‌ಮೆಂಟಿನ ಕಮೀಷನರ್ ಆಫ್ ಎಕ್ಸೈಸ್ ಮತ್ತು ಡೆಪ್ಯುಟಿ ಕಮೀಷನರ್ ಕಂಟ್ರಾಕ್ಟರ್ಸ್ ಮೇಲೆ ನಿಯಂತ್ರಣ ಇಟ್ಟುಕೊಂಡಿರುತ್ತಾರೋ, ಯಾರು ಯಾರಿಗೆ ತಲೆ ತಗ್ಗಿಸುತ್ತಾರೋ ಸಾರ್ವಜನಿಕ ಹಿತದೃಷ್ಟಿಗೆ ತದ್ವಿರುದ್ಧವಾಗಿ ಎನ್ನುವುದನ್ನು ನಾನು ಬಹಳ ನಮ್ರತೆಯಿಂದ ನೊಂದು ಹೇಳಬೇಕಾಗಿದೆ. ಆದ್ದರಿಂದ ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಆ ರಸ್ತೆಯಲ್ಲಿರುವ arrack ಶಾಪ್‌ನ್ನು ಶಿಫ್ಟ್ ಮಾಡದೆ ಹೋದರೆ ಪ್ರಚಂಡವಾದ ಒಂದು ಹೋರಾಟವನ್ನು ಮಾಡಬೇಕಾಗುತ್ತದೆ. ಅದಾದ ಮೇಲೆ ನನ್ನ ಜನರ ಸಹಾಯವನ್ನು ಪಡೆದು ಧರಣಿ ಕುಳಿತುಕೊಳ್ಳುತ್ತೇನೆ. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ; ಒಂದು arrack ಶಾಪನ್ನು ತೆಗೆಯುವುದಕ್ಕಾಗುವುದಿಲ್ಲವೆಂದರೆ ಏನು ಅರ್ಥ. ಗಾಂಧಿ ನಗರದಲ್ಲಿ ಮೇಯರ್‌ರವರು ಒಂದು ಕೂಗು ಹಾಕಿದ ತಕ್ಷಣ ಗಾಂಧಿನಗರದಲ್ಲಿದ್ದಂಥ arrack ಶಾಪ್‌ನ್ನು ತೆಗೆಯುವುದಕ್ಕೆ ಆಯಿತು. ಇದು ಬಹಳ ಕಾಲದಿಂದಲೂ ಹೋರಾಟ ನಡೆಯುತ್ತಿರತಕ್ಕಂಥನ್ನು ತೆಗೆಯುವುದಕ್ಕೆ ಆಗುವುದಿಲ್ಲವೆಂದರೆ ನಾವು ಆ ಸರ್ಕಾರವನ್ನು ಕೊಡುವುದಾದರೂ ಹೇಗೆ? ದಕ್ಷ ಸರ್ಕಾರವನ್ನು ಕೊಡುವುದಾದರೂ ಹೇಗೆ? ನಿಷ್ಟೆಯಾದ ಸರ್ಕಾರವನ್ನು ಕೊಡುವುದಾದರೂ ಹೇಗೆ ಎಂದು ಹೇಳುತ್ತೇನೆ. ಯಾವ ರೀತಿ ಆಡಳಿತವನ್ನು ಯಾರಿಗಾಗಿ ಕೊಡುತ್ತಿದ್ದೇವೆ. ನಾವು ಆಡಳಿತವನ್ನು ಕೊಡುತ್ತಾ ಇದ್ದೆವೆಯೋ ಎನ್ನುವಂಥದ್ದನ್ನು ನಾವು ಈ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇಂಥ ಒಂದು ದ್ವಂದ್ವ ವಾದವನ್ನು ನಾನು ತಮ್ಮ ಮುಂದೆ ಇಡುತ್ತಿಲ್ಲ. ನಾನು ಹೋರಾಟಕ್ಕೆ ಇಳಿದೇ ಇಳಿಯುತ್ತೇನೆ. ತಮ್ಮ ಒಂದು ರಕ್ಷಣೆಯನ್ನು ಪಡೆದು ಇಲ್ಲಿ ಧರಣಿಯನ್ನು ಕುಳಿತುಕೊಳ್ಳುತ್ತೇನೆ; ಇನ್ನು ಒಂದು ತಿಂಗಳೊಳಗೆ ಆ ಅರ್ರ್ಯಾಕ್ ಶಾಪ್‌ನ್ನು ಶಿಫ್ಟ್ ಮಾಡದೆ ಹೋದರೆ ಅದನ್ನು ಶಿಫ್ಟ್ ಮಾಡಲೇಬೇಕು. ತದನಂತರ ಆ ಭಾಗದಲ್ಲಿಯೂ ಕೂಡ ನಾನು ಸಾಕಷ್ಟು ಚಳುವಳಿಯನ್ನು ಮಾಡಿಸುತ್ತೇನೆ. ಅದರಿಂದಾಗಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಏನಾದರೂ ಕ್ರಿಯೇಟ್ ಆದರೆ ಸರ್ಕಾರಕ್ಕೆ ಅದರ ಜವಾಬ್ದಾರಿ ನನ್ನದಾಗುವುದಿಲ್ಲ. ಈ ಸರ್ಕಾರದ್ದೇ ಪೂರ್ಣವಾದ ಜವಾಬ್ದಾರಿಯಾಗುತ್ತದೆಂದು ಈ

ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಸಾರ್ವಜನಿಕ ಪರವಾಗಿ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ತಾವೇನಾದರೂ ಬೆಂಬಲ ಕೊಟ್ಟರೆ ತಮಗೂ ನಾನು ಎಚ್ಚರಿಕೆ ಕೊಡುತ್ತೇನೆ.

ಇನ್ನು ಪ್ರೈವೇಟೇಷನ್ ಪ್ರೈವೇಟ್ ಎಂಟರ್‌ಪ್ರೈಸೆಸ್ ಬಗ್ಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಹೊರ ರಾಜ್ಯಗಳಿಂದ ಬರುವಂಥವರಿಗೆ ಒಂದು ಕರೆ ಕೊಟ್ಟಿದ್ದೀರಿ. ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಹಾಯ ಮಾಡುತ್ತೇವೆ, ವಿದ್ಯುಚ್ಛಕ್ತಿ ಕೊಡುತ್ತೇವೆ, ನಿವೇಶನಗಳನ್ನು ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ, ಪ್ರತಿಯೊಂದು ವಿಷಯದಲ್ಲಿ ಅವರು ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಎಲ್ಲಾ ಅನುಕೂಲಗಳನ್ನು ಮಾಡಿ ಕೊಡುತ್ತೇವೆಂದು ಹೇಳಿರುತ್ತೀರಿ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಹೊರರಾಜ್ಯಗಳಿಂದ ಬಂದಿರತಕ್ಕಂಥವರೇ ಹೆಚ್ಚಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಸಫಲರಾಗಿ ಮಾಡುತ್ತಿರುತ್ತಾರೆ. ರಾಜ್ಯಮಟ್ಟದಲ್ಲಿರುವಂಥ ಕೈಗಾರಿಕೋದ್ಯಮಿಗಳು ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿರುವವರು ಬಹಳ ಕಡಿಮೆ. ಅವರ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ. ಹೊರ ರಾಜ್ಯಗಳಿಂದ ಬಂದವರು ಒಂದು ಕಾಂಪಿಟೇಷನ್ ಎಷ್ಟರ ಮಟ್ಟಿಗೆ ಇದೆ ಎಂದು ಹೇಳಿದರೆ ಅವರು ಕೊಟ್ಯಾಂತರ ರೂಪಾಯಿಗಳ ಲಂಚ ರುಷುವತ್ತುಗಳನ್ನು ಕೊಟ್ಟು, ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಸರ್ವೀಸೆಸ್ ಎಲ್ಲಾ ಪ್ರೊವೈಡ್ ಮಾಡಿ ಅವರು ಬದುಕಿಕೊಂಡು ಹೋಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ಕನ್ನಡಿಗರು ಯಾವುದೇ ಕಾರಣಕ್ಕೂ ತಲೆ ಎತ್ತಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಸಾಕಷ್ಟು ಡಿಸ್‌ಕರೇಜ್ ಕೊಡುವಂಥ ಪ್ರಯತ್ನ ನಮ್ಮ ಕೈಗಾರಿಕಾ ಇಲಾಖೆ ಮಾಡುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತಿದ್ದೇನೆ. ಯಾರು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ನಡೆಸುವಂಥ ಶಕ್ತಿಯನ್ನು ಹೊಂದಿರುತ್ತಾರೆ, ಯಾರು ಯುವಕರಿದ್ದಾರೆ ಅಂಥವರಿಗೆ ಹೆಚ್ಚು ಹೆಚ್ಚು ಸಹಾಯ ಕೊಟ್ಟು, ಸಹಕಾರವನ್ನು ತೋರಿಸಿ, ಹಣದ ಸಹಾಯ ಮಾಡಿ, ಮಾರ್ಕೆಟಿಂಗ್ ವಿಷಯದಲ್ಲಿ ಸಾಕಷ್ಟು ಅವರಿಗೆ ತರಬೇತಿಯನ್ನು ಕೊಟ್ಟು ಅದೆಲ್ಲವನ್ನು ಮಾಡಿದರೆ ಕರ್ನಾಟಕದಲ್ಲಿರುವ ಕನ್ನಡಿಗರು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಪ್ರಗತಿಯನ್ನು ಸಾಧಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಕನ್ನಡಿಗರಿಗೆ ಸಾಕಷ್ಟು ಪ್ರಮಾಣದಲ್ಲಿ ಕೆಲಸವನ್ನು ಕೊಡಲಿಕ್ಕೂ ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ನಮ್ಮ ರಾಜ್ಯಕ್ಕೆ ಬಂದು ಹೆಚ್ಚು ಪ್ರಮಾಣದಲ್ಲಿ ನಿಮಗೆ ಲಂಚ ರುಷುವತ್ತುಗಳನ್ನು ಕೊಟ್ಟು, ಅದಕ್ಷತೆಯಿಂದ ನಡೆಸಿ, ರಾಜ್ಯದ ಹಿತಚಿಂತನೆ ಇಲ್ಲದಂಥ ಒಂದು ಕೆಲಸವನ್ನು ಮಾಡಿ, ನಮಗೆ ಮತ್ತಷ್ಟು ಹೆಚ್ಚು ರೀತಿಯಲ್ಲಿ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್, ಹೌಸಿಂಗ್ ಪ್ರಾಬ್ಲಮ್, ಟ್ರಾಫಿಕ್ ಪ್ರಾಬ್ಲಮ್, ಎಲ್ಲಾ ರೀತಿಯಲ್ಲೂ ಪ್ರಾಬ್ಲಮ್‌ಗಳನ್ನು ಜಾಸ್ತಿ ಮಾಡುವುದಕ್ಕೆ ಸಹಾಯ ಮಾಡುವಂಥ ಕೆಲಸ ಮಾಡಬಾರದೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅವರು ಯಾರಿಂದ ದುಡ್ಡನ್ನು ತೆಗೆದುಕೊಳ್ಳುತ್ತಾರೆಂದರೆ, ಬಂದ ಕೂಡಲೇ 10 ಲಕ್ಷ ರೂಪಾಯಿಗಳ ಬಂಡವಾಳವನ್ನು ತೊಡಗಿಸಿ ಎರಡು ಕೋಟಿ ರೂಪಾಯಿಗಳವರೆಗೆ ನಮ್ಮ ರಾಜ್ಯದಲ್ಲಿರುವ ಬ್ಯಾಂಕ್‌ಗಳ ಮೂಲಕ ತೆಗೆದುಕೊಳ್ಳುತ್ತಾರೆ. ಕೆ. ಐ.ಡಿ.ಸಿ.ಯಿಂದ ತೆಗೆದುಕೊಳ್ಳುತ್ತಾರೆ, ಕೆ.ಐ.ಐ.ಡಿ.ಸಿ.ಯಿಂದ ತೆಗೆದುಕೊಳ್ಳುತ್ತಾರೆ. ಪ್ರತಿಯೊಂದನ್ನು ನಮ್ಮ ರಾಜ್ಯ ಸರ್ಕಾರದ ಸಹಾಯದಿಂದ ತೆಗೆದುಕೊಂಡು ಅವರು ಬದುಕುತ್ತಾರೆ. ಅದೇ ರೀತಿಯ ಸಹಾಯವನ್ನು ನಮ್ಮ ರಾಜ್ಯದಲ್ಲಿರುವ ಕನ್ನಡಿಗರಿಗೆ ಏತಕ್ಕೆ ಕೊಡಬಾರದು, ಏತಕ್ಕೆ ನಮ್ಮವರಿಗೆ ಉತ್ತೇಜನ ಕೊಡಬಾರದು? ಬೆಂಬಲವನ್ನು ಏತಕ್ಕೆ ಸೂಚಿಸಬಾರದು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹೆಚ್ಚು ಹೆಚ್ಚು ಪ್ರೈವೇಟೇಷನ್‌ಗೆ ಅವಕಾಶ ಮಾಡಿದರೆ ultimately it would be a comulative disaster but the economy for State ಎಂದು ನಾನು ಹೇಳುತ್ತೇನೆ. ಇನ್ನು ಅರ್ಬನೈಸೇಷನ್ ವಿಷಯದಲ್ಲಿ ಹೇಳುವುದಾದರೆ ಈಗ ಇರುವ ಅರ್ಬನ್ ಪಾಲೀಸಿ ನನಗೆ ಅರ್ಥವಾಗುತ್ತಿಲ್ಲ. ನಾನು ಈ ಸದನದಲ್ಲಿ ಪದೇ ಪದೇ

ಹೇಳುತ್ತಲೇ ಇದ್ದೇನೆ. ಬೆಂಗಳೂರು ನಗರಕ್ಕೆ ಸೀಮಿತವಾಗಿ ನಾನು ಹೇಳುತ್ತೇನೆ. ಸುಮಾರು 100 ವರ್ಷಗಳಿಂದ ಬೆಂಗಳೂರು ನಗರ ಅರ್ಬನ್ ಪ್ಲಾನಿಂಗ್‌ನಲ್ಲಿ ಏನು ಆಗಿದೆ ಎಂದು ಹಿಂದೆ ಹೇಳಿದ್ದೇನೆ, ಮತ್ತೆ ಹೇಳುತ್ತೇನೆ. ದಯವಿಟ್ಟು ಕ್ಷಮಿಸಬೇಕು. 100 ವರ್ಷಗಳ ಕೆಳಗೆ ಯಾವ ಮುಸಲ್ಮಾನ್ ಅಲ್ಪಸಂಖ್ಯಾತರು ಯಾವ ಯಾವ ವಿಭಾಗದಲ್ಲಿ ಯಾವ ರೀತಿ ಜೀವನ ನಡೆಸುತ್ತಿದ್ದಾರೊ ಅದಕ್ಕಿಂತ ಕೆಟ್ಟ ಜೀವನವನ್ನು ಇವತ್ತು ಅವರು ನಡೆಸುತ್ತಿದ್ದಾರೆ. ಯಾವ ಹರಿಜನ ಗಿರಿಜನರು ಯಾವ ಯಾವ ಇದ್ದರೊ ಅದೇ ಜನ ಹೆಚ್ಚು ಸಂಖ್ಯೆಯಲ್ಲಿ ಅದೇ ರೀತಿಯಾದ ಜೀವನ ನಡೆಸುತ್ತಿದ್ದಾರೆ. ಹಳ್ಳಿಗಳಿಂದ ಹತ್ತಾರು ಸಾವಿರ ಎಕರೆ ಜಮೀನು ತೆಗೆದುಕೊಂಡು ಬೆಂಗಳೂರು ನಗರದಲ್ಲಿ ಯೋಜನೆಯನ್ನು ಹಾಕಿ ಏನು ಅರ್ಬನ್ ಪ್ಲಾನಿಂಗ್ ಡೆವೆಲಂಪ್‌ಮೆಂಟ್ ಮಾಡಿದ್ದೆವೊ ಅದರಿಂದ ಬಂದ ಲಾಭವೆಲ್ಲ ಆ ಹಳ್ಳಿ ಜನಕ್ಕೆ ಇಲ್ಲದೆ ಆ ಹಳ್ಳಿಗಳು ಹಾಗೆಯೇ ಕೊಂಪೆಗಳಾಗುತ್ತಿವೆ. ಹಾಗೆಯೇ ಹಿಂದುಳಿದ ವರ್ಗಗಳು, ಶೋಷಿತ ವರ್ಗಗಳು ಬೆಂಗಳೂರು ನಗರದಾದ್ಯಂತ ಅದೇ ಶೋಷಣೆಗೆ ಒಳಪಟ್ಟು ಹಾಗೆಯೇ ಉಳಿದುಕೊಂಡು ಬಂದಿವೆ. ಬೆಂಗಳೂರು ನಗರವನ್ನು ಸವಿಸ್ತಾರವಾಗಿ ಯೋಜಿತವಾಗಿ ಬೆಳೆಸುವುದಕ್ಕಾಗಿ ಸ್ಲಮ್ಸ್ ಎಂದು ನಾವು ಕ್ರಿಯೇಟ್ ಮಾಡಿದೆವು. ಆದರೆ ಸ್ಲಮ್ಸ್‌ನಲ್ಲಿರುವವರು ಬೆಂಗಳೂರು ನಗರವನ್ನು ಕಟ್ಟುವುದರಲ್ಲಿ ಪ್ರಯತ್ನ ಮಾಡಿದರು, ಕಷ್ಟಪಟ್ಟರೂ ಅದೇ ಸ್ಲಮ್‌ಗಳಲ್ಲಿದ್ದಾರೆ. ಬೆಂಗಳೂರು ನಗರದಲ್ಲಿ ನಾಲ್ಕು ಹಿಂದುಳಿದ ಭಾಗಗಳು ಏನಿವೆ ಅವು ನೂರು ವರ್ಷಗಳಿಂದ ಹಾಗೆಯೇ ಇನ್ನೂ ಬಹುತೇಕ ಹೊಲಸು ಕೊಂಪೆಗಳಾಗಿಯೇ ಉಳಿದುಕೊಂಡಿವೆ ವರ್ಷಗಳ ನಂತರವೂ ಏನೊಂದು ಬದಲಾವಣೆಯಾಗದೆ ಹಾಗೆಯೇ ಉಳಿದಿವೆ. ಅರ್ಬನ್ ಪ್ಲಾನಿಂಗ್ ಅಂಡ್ ಡೆವಲೆಪ್‌ಮೆಂಟ್ ಏನಿದೆ ಅದನ್ನು ಹೆಚ್ಚು ಪ್ರಮಾಣದಲ್ಲಿ ಮಾಡುತ್ತಿದ್ದೇವೆಂದು ಹೇಳಿ ದೊಡ್ಡ ಲೆವೆಲ್‌ನಲ್ಲಿ ಹೈಪವರ್ ಕಮಿಟಿಯನ್ನು ಇಟ್ಟುಕೊಂಡು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಇದು ಕೇವಲ ಬ್ಯೂರೋಕ್ರಾಟ್ಸ್ ಕಮಿಟಿಗಳಾಗಿ ಬ್ಯೂರೋಕ್ರಾಟಿಕ್ ಅಪ್ರೋಚ್ ಆಗಿ ಪಾಪ್ಯುಲರ್ ಇಂಟೆರೆಸ್ಟ್ ಕೈಬಿಟ್ಟು ಮಾಡುವಂಥ ಕೆಲಸಗಳು ನಡೆದುಕೊಂಡು ಬರುತ್ತಿದೆ. ಆದ್ದರಿಂದ ತಮ್ಮಲ್ಲಿ ಈ ಸರ್ಕಾರವನ್ನು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಯಾವುದೇ ಒಂದು ಸಾಧಾರಣ ನಾಗರೀಕರ ಪರವಾಗಿ, ಅವರ ಬೆಳವಣಿಗೆಗಾಗಿ, ಅವರ ಅಭಿವೃದ್ಧಿಗಾಗಿ ಅವರ ಪ್ರಗತಿಗಾಗಿ ಮಾಡಬೇಕಾದಾಗ ಸಾಧಾರಣವಾಗಿ ಜನತಾ ಪ್ರತಿನಿಧಿಗಳು ಯಾರು ಕಮಿಟೆಡ್ ರೆಪ್ರಸಂಟೆಟೀವ್ಸ್ ಎಂದು ಇರುತ್ತಾರೋ ಆ ವಿಷಯಗಳಲ್ಲಿ ಸಾಕಷ್ಟು ಕಮಿಟ್‌ಮೆಂಟ್ಸ್ ಇರುತ್ತದೆ. ಹಾನೆಸ್ಟ್ ಇರುತ್ತದೆ ಅಂಥಾವರನ್ನು ಸೇರಿಸಿ ಒಂದು ನಾನ್–ಅಫಿಷಿಯಲ್ಸ್ ಕಮಿಟಿಯನ್ನು ಮಾಡಿದಾಗ ಮಾತ್ರ ಅದು ಸರಿಯಾದ, ಉಪಯುಕ್ತವಾದ ಕಮಿಟಿಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂಥ ಕಮಿಟಿಯಾಗುತ್ತದೆ.

ಅದು ಕೇವಲ ಬ್ಯೂರೋಕ್ರೆಟ್ಸ್ ಕಮಿಟಿಯಾದರೆ ಏನು 100 ವರ್ಷಗಳಿಂದ ಇದುವರೆವಿಗೂ ಬ್ಯೂರೋಕ್ರಾಟ್ಸ್ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಮಾಡಿಕೊಂಡು ಬಂದಿರುತ್ತಾರೆ. ಅದು ಯಾವ ಬೆನಿಫಿಷಿಯರೀಸ್‌ಗೂ, ಯಾವ ಸಾಧಾರಣ ಶೋಷಿತ ವರ್ಗಕ್ಕೂ ಹೋಗಿಲ್ಲ, ಆ ಜನ ಹಾಗೆಯೇ ಆಗುತ್ತಾರೆ. ಅದೇ ರೀತಿಯಲ್ಲಿ ಮೊನ್ನೆ ಮೊನ್ನೆ ತಾನೆ ಒಂದು ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್‌ನಲ್ಲಿ ಒಂದು ಹೈಪವರ್ ಕಮಿಟಿ ಎಂದು ಮಾಡಿದರು. ಅದರಲ್ಲೂ ಕೂಡ ಈ ಸದನದ ಸದಸ್ಯರನ್ನಾಗಲಿ, ಪಾರ್ಲಿಮೆಂಟ್ ಸದಸ್ಯರನ್ನಾಗಲಿ, ಬೆಂಗಳೂರು ನಗರದ ನಾಗರೀಕರು ಅದರಲ್ಲೂ ಯಾರು ಬಹಳ ಕಾಲದಿಂದ ಅನುಭವ ಪಡೆದಂಥವರು ಮತ್ತು ನಿಷ್ಠೆಯುಳ್ಳಂಥವರನ್ನೂ ಕೂಡ ಸೇರಿಸಿ ಮಾಡಲಿಲ್ಲ. ಎಲ್ಲೋ ಕುಳಿತುಕೊಂಡರು, ಎಲ್ಲೋ ಕುಳಿತುಕೊಂಡು ತೀರ್ಮಾನಗಳನ್ನು ಮಾಡಿದರು. ಅದರ ಹೊರೆಯನ್ನು ಬೆಂಗಳೂರು ನಗರದ ನಾಗರೀಕರ ಮೇಲೆ ಹೇರಿದರು. ಅದು ಯಾವಾಗ ಅನುಷ್ಠಾನಕ್ಕೆ ಬರುತ್ತದೆ, ಹೇಗೆ ಬರುತ್ತದೆ, ಈ ಜನತೆ ಅವರ ಸಂಕಷ್ಟಗಳನ್ನು ಹೇಗೆ ಎದುರಿಸುತ್ತಾರೆ ಎನ್ನುವ ಮಾತು ಇಲ್ಲ. ಆದ್ದರಿಂದ ನಾನು ಬಹಳ ಒತ್ತಾಯ ಪೂರ್ವಕವಾಗಿ ಹೇಳುತ್ತೇವೆ. ಸರ್ಕಾರ ಯಾವುದೇ

ಸಂದರ್ಭದಲ್ಲಿ ಯೋಜನೆ ಮಾಡುವಂತಹ ಒಂದು ಸಮಿತಿಯನ್ನು ಮಾಡಿದ್ದೇ ಆದರೆ ಸಾರ್ವಜನಿಕ ಪ್ರಗತಿಗಾಗಿ, ಅಭಿವೃದ್ಧಿಗಾಗಿ, ಕಲ್ಯಾಣಕ್ಕಾಗಿ ಮಾಡುವುದಾದರೆ ನಾನ್–ಅಫಿಷಿಯಲ್ ಮೆಂಬರ್ಸ್‌ನ್ನು ಕೂಡ ಸೂಕ್ತವಾದಂಥವರನ್ನು, ಅನುಭವಸ್ಥರನ್ನು, ನಿಷ್ಠಾವಂತರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಬೇಕು. ಅದನ್ನು ಮಾಡಿದಾಗ ಮಾತ್ರ ಆ ಸಮಿತಿ ಒಂದು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಆಗುತ್ತದೆ.

ಸಾರ್ವಜನಿಕರ ಹಿತದೃಷ್ಟಿಯನ್ನು ಪ್ರತಿಬಿಂಬಿಸುವುದಕ್ಕೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಟ್ರಾಫಿಕ್ ಪ್ರಾಬ್ಲಂ ಏಷ್ಟಾಗುತ್ತಿದೆ ಎಂದು ಪದೇ ಪದೇ ಹೇಳುತ್ತಿದ್ದೇವೆ. ಒಂದು ಕಡೆಯೂ ಪಾರ್ಕ್ ಮಾಡುವುದಕ್ಕಾಗುವುದಿಲ್ಲ. ಎಲ್ಲಿ ಪಾರ್ಕಿಂಗ್ ಮಾಡಕೂಡದು ಅಂಥ ಕಡೆಗಳಲ್ಲಿ ಪಾರ್ಕಿಂಗ್‌ಗೆ ಪೊಲೀಸ್ ಅಧಿಕಾರಿಗಳು ಹೆಚ್ಚಿನ ಅವಕಾಶ ಮಾಡಿಕೊಡುತ್ತಿದ್ದಾರೆ. ಎಲ್ಲಿ ಪಾರ್ಕಿಂಗ್ ಮಾಡಬೇಕೋ ಅಲ್ಲಿ ಮಾಡುವುದಕ್ಕೆ ಅವಕಾಶ ಮಾಡುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಚರ್ಚ್‌ಗಳ ಹತ್ತಿರ, ಶಾಲೆಗಳ ಹತ್ತಿರ, ಮಸೀದಿಗಳ ಹತ್ತಿರ ಎಲ್ಲೆಲ್ಲಿ ಅನಾವಶ್ಯಕವಾಗಿ ಜನ ಒಂದು ಕಾರ್ ಪಾರ್ಕಿಂಗ್ ಮಾಡುತ್ತಾರೆ ಆ ಭಾಗದಲ್ಲಿ ಪಾರ್ಕಿಂಗ್ ನಿಷೇಧ ಮಾಡಲೇಬೇಕು. ಬಹಳ ದೂರ ಪಾರ್ಕಿಂಗ್ ಮಾಡಿ ಮಕ್ಕಳಾಗಿರಲಿ, ಹಿರಿಯರಾಗಿರಲಿ ನಡೆದುಕೊಂಡು ಆ ಜಾಗಕ್ಕೆ ಹೋಗತಕ್ಕ ಕೆಲಸ ಮಾಡಬೇಕು. ಆ ರೀತಿ ಮಾಡದಿದ್ದರೆ ಅಲ್ಲಿ ಆಕ್ಸಿಡೆಂಟ್ಸ್ ಜಾಸ್ತಿ ಆಗುತ್ತದೆ. ಬಾಲ್ಡ್ವಿನ್ ಗರ್ಲ್ಸ್ ಹೈಸ್ಕೂಲ್ ಹತ್ತಿರ ಪಾರ್ಕಿಂಗ್ ಮಾಡಬೇಡಿ ಎಂದು ಹೇಳಿದ್ದೇನೆ. ಅಲ್ಲಿ ನನಗೆ 4 ಸಾರಿ ಆಕ್ಸಿಡೆಂಟ್ ಆಗಿದೆ. ಡಬಲ್ ಲೈನ್ ಪಾರ್ಕಿಂಗ್ ರಿಚ್‌ಮಂಡ್ ರೋಡ್‌ನಲ್ಲಿ ರೀನೇಜ್ ಸ್ಟ್ರೀಟ್‌ನಲ್ಲಿ ಮಾಡುತ್ತಾರೆ. ಪೊಲೀಸರು ಇದರ ಕಡೆ ಗಮನ ಕೊಡುತ್ತಿಲ್ಲ. ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್, ಗರ್ಲ್ಸ್ ಸ್ಕೂಲ್ ಹತ್ತಿರ ಸೋಫಿಯ ಕಾನ್‌ವೆಂಟ್ ಹತ್ತಿರ ಎಲ್ಲ ಪಾರ್ಕಿಂಗ್ ಮಾಡುವುದರಿಂದ ಆಕ್ಸಿಡೆಂಟ್‌ಗಳು ಬಹಳ ಆಗುತ್ತಿವೆ. ಬೇಡವೆಂದರೂ ಪೊಲೀಸರು ಕೇಳುತ್ತಿಲ್ಲ. ಕಾರ್ ಓನರ್ಸ್ ಮತ್ತು ಲಕ್ಸುರಿ ಲೈಫ್ ರೀಡ್ ಮಾಡುವವರಿಗೆ ಮಾತ್ರವೇ ಈ ಬೆಂಗಳೂರು ನಗರ ಇರುವುದು ಬಡ ಪಾದಚಾರಿಗಳು, ಸೈಕಲ್ ಮೇಲೆ ಸವಾರಿ ಮಾಡುವವರಿಗೆ ಜನಸಾಮಾನ್ಯರಿಗೆ ರಸ್ತೆ ಅನುಕೂಲವಾಗಿದೆಯೇ ಎಂದು ನಾವು ಯೋಚಿಸಬೇಕಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಟ್ರಾಫಿಕ್ ಪೊಲೀಸ್ ಇಲಾಖೆಯವರಿಗೆ ತೀವ್ರ ಆದೇಶ ಕೊಡಬೇಕು. ಪಾರ್ಕಿಂಗ್ ಇಂಥ ಸ್ಥಳದಲ್ಲಿ ತೆಗೆದುಹಾಕಬೇಕು, ಇಂಥ ಸ್ಥಳಗಳಲ್ಲಿ ಮಾಡಬಾರದೆಂದು ಹೇಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಬೆಂಗಳೂರು ನಗರದಲ್ಲಿ ಸರ್ಫೇಸ್ ಪಾರ್ಕಿಂಗ್ ಸಾಧ್ಯತೆ ಇಲ್ಲ. ಅದಕ್ಕಾಗಿ ನಾವು ಹೈರೈಸ್ ಬಿಲ್ಡಿಂಗ್ ಕಟ್ಟುವಾಗ ಬೇಸ್‌ಮೆಂಟ್ ಪಾರ್ಕಿಂಗ್ ಮಾಡಬೇಕೆಂದು ಲೈಸೆನ್ಸ್ ಕೊಟ್ಟಿದ್ದೇವೆ. ಆದರೆ ಬೇಸ್‌ಮೆಂಟ್ ಪಾರ್ಕಿಂಗ್‌ಗೆ ಲೈಸೆನ್ಸ್ ತೆಗೆದುಕೊಂಡು ಬೇಸ್‌ಮೆಂಟ್ ಪಾರ್ಕಿಂಗ್ ಮಾಡದೆ ರೆಸ್ಟೋರೆಂಟ್ಸ್ ವ್ಯಾಪಾರಕ್ಕೆ ಹೀಗೆ ನಾನಾ ಕಾರಣಕ್ಕೆ ದುರುಪಯೋಗವಾಗುತ್ತಿದೆ. ಇಲ್ಲಿ ಹೇಳುತ್ತಿದ್ದಾರೆಯೇ ಹೊರತು ಯಾವುದೇ ತೀವ್ರ ಕ್ರಮ ಕಟ್ಟಡದ ಓನರ್ ಮೇಲಾಗಲಿ, ಲೈಸೆನ್ಸ್ ದುರುಪಯೋಗ ಮಾಡಿದವರ ಮೇಲಾಗಲಿ ತೆಗೆದುಕೊಂಡಿಲ್ಲ. ಅಂದ ಮೇಲೆ ನಾವು ನಿಷ್ಠೆಯ ಆಡಳಿತ, ದಕ್ಷ ಆಡಳಿತ, ಸ್ವಚ್ಛ ಆಡಳಿತ, ಸಾರ್ವಜನಿಕರ ಅನುಕೂಲಕ್ಕಾಗಿ ಆಡಳಿತ ಕೊಡುತ್ತೇವೆಂದರೆ ಏನು ಅರ್ಥ ಇದೆಯೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಆಗಿಂದಾಗ್ಗೆ ಸದನದಲ್ಲಿ ಹೈವೇ ರಾಬರಿ, ಡೇಲೈಟ್ ರಾಬರಿ ವಿಷಯ ಕೇಳುತ್ತಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಿಲ್ಲ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ, ಹೈವೇ ರಾಬರಿ ತಡೆಗಟ್ಟಬಹುದು, ಡೇಲೈಟ್ ರಾಬರಿ ತಡೆಗಟ್ಟಬಹುದು. ಆದರೆ ಪೊಲೀಸ್ ಠಾಣೆಗಳಲ್ಲಿ ಏನು ರಾಬರಿ ನಡೆಯುತ್ತಿದೆ

ಅದನ್ನು ತಡೆಗಟ್ಟುವುದಕ್ಕೆ ಇವರಿಂದ ಸಾಧ್ಯವಾಗಿಲ್ಲ. ಅಮಾಯಕರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಅವರಿಗೆ ಅಮಾನುಷವಾಗಿ ಕಷ್ಟ ಕೊಟ್ಟು ಏರೋಪ್ಲೇನ್ ಹಾಕಿ ಅವರನ್ನು ಬಲಿ ಹಾಕಿ ಅವರಿಂದ ಸಹಸ್ರಾರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಮಾಹಿತಿ ಕೊಡಬೇಕೆಂದರೆ ನನ್ನ ಹತ್ತಿರ ಇದೆ. ಈ ಸಂದರ್ಭದಲ್ಲಿ ಒಂದು ಮಾಹಿತಿ ಮಾತ್ರ ಹೇಳುತ್ತೇನೆ. ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಜನವರಿ 16 ರಂದು ಆಡುಗೋಡಿ – ಮಡಿವಾಳದಿಂದ ದೂರ ಇರುವ ಸ್ಥಳದಿಂದ ಹರಿಜನ ಯುವಕನನ್ನು ಕಮರ್ಷಿಯಲ್ ಪೊಲೀಸ್ ಸ್ಟೇಷನ್ ಹನುಮಂತರಾಯಪ್ಪ ಎಂಬುವವರು ವೈಯಕ್ತಿಕ ದ್ವೇಷಕ್ಕಾಗಿ ಹಿಡಿದುಕೊಂಡು ಬಂದು ಠಾಣೆಯಲ್ಲಿ ಹಾಕಿ ಬರೀ ಮೈ ಮಾಡಿ ಹೊಡೆದು ಹೀನಾಮಾನವಾಗಿ ಅಮಾನುಷ ಕೃತ್ಯ ನಡೆಸಿ ಏರೋಪ್ಲೇನ್ ಹಾಕಿ ತೊಂದರೆ ಕೊಟ್ಟು ಅವನ ಕೈಯಲ್ಲಿ ಎರಡು ಚೆಕ್‌ಗಳಿಗೆ, ಒಂದು ಲಕ್ಷದ 25 ಸಾವಿರ ರೂಪಾಯಿನದು ಒಂದು, ಇನ್ನೊಂದು ಬ್ಲಾಂಕ್ ಚೆಕ್ ಸಹಿ ಮಾಡಿಸಿ ತೆಗೆದುಕೊಂಡು, ಬಿಳಿ ಕಾಗದದ ಮೇಲೆ ಮತ್ತೊಂದು ಸಹಿ ಮಾಡಿಸಿ ಬಹಳ ತೊಂದರೆ ಕೊಡುವುದರ ಜೊತೆಗೆ, ಅವರ ಹೆಂಡತಿಯನ್ನು ಬರಮಾಡಿಕೊಂಡು ಆಕೆಯ ಮೈಮೇಲಿದ್ದ ಒಡವೆಗಳನ್ನು ಕಿತ್ತುಕೊಂಡು ಪೊಲೀಸರ ಕೈಯಲ್ಲಿ ಕಳುಹಿಸಿ ಮಾರ್ವಾಡಿ ಪಾನ್ ಬ್ರೋಕರ್ ಹತ್ತಿರ ಕೊಟ್ಟು 5 ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಆ ಸಬ್‌ಇನ್ಸ್‌ಪೆಕ್ಟರ್ 5 ಸಾವಿರ ರೂಪಾಯಿಗಳನ್ನು ಠಾಣೆಯಲ್ಲಿ ಕಿತ್ತುಕೊಂಡಿದ್ದಾರೆ. ಈ ವಿಷಯವನ್ನು ಯಾರಿಗಾದರೂ ಹೇಳುತ್ತೇನೆಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಹಾಕಿದ್ದಾರೆ. ಎಂ.ಎಲ್.ಎ.ಗಳಿಗೆ, ಮೇಲಧಿಕಾರಿಗಳಿಗೆ, ವಕೀಲರಿಗೆ, ಪತ್ರಿಕೆಯವರಿಗೆ ಯಾರಿಗಾದರೂ ಹೇಳಿದರೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಸಿದ್ದಾರೆ. ಧೈರ್ಯ ಮಾಡಿ ನನ್ನ ಹತ್ತಿರ ಬಂದ ಮೇಲೆ ಠಾಣೆಯ ಇನ್ಸ್‌ಪೆಕ್ಟರ್‌ಗೆ ಕಾಂಟಾಕ್ಟ್ ಮಾಡಿ ಆದರೂ ಆ ಯುವಕ ನಾನು ಆ ಬಗ್ಗೆ ಸಬ್ ಇನ್ಸ್‌ಪೆಕ್ಟರ್ ಹತ್ತಿರ ಮಾತನಾಡಿದರೆ ಆತ ಬಹಳ ದುರಹಂಕಾರದಿಂದ ಮಾತನಾಡಿದ.

ಏನ್ರಿ ಒಬ್ಬ ಬಡವನನ್ನು ಹಿಡಿದುಕೊಂಡು ಬಂದು ಅವಮರ್ಯಾದೆ ಮಾಡಿದ್ದೀರಿ ಅಂದರೆ ನಿಮ್ಮಂತಹವರು ಸಿಕ್ಕರೆ ನಿಮಗೂ ಮಾಡುತ್ತೇವೆ, ಎಲ್ಲರಿಗೂ ಮಾಡುತ್ತೇವೆಂದು ಹೇಳಿದ. ಇಷ್ಟು ದುರ್ಮಾರ್ಗತನ, ಇಷ್ಟು ದುರಹಾಂಕರತನ ಪೊಲೀಸ್ ಠಾಣೆಗಳಲ್ಲಿ ನಡೆಯುತ್ತಿದೆ. ಯಾರಾದರೂ ಸಾರ್ವಜನಿಕರು ಕಂಪ್ಲೈಂಟ್ ಮಾಡುವುದಕ್ಕೆ ಹೋದರೆ ಅವರನ್ನೇ ಹೊಡೆಯುವುದು. ಇದು ಆದ ಮೇಲೆ ನಾನು ಅಲ್ಲಿನ ಇನ್ಸ್‌ಪೆಕ್ಟರ್ ಡಿಸೌಜರವರನ್ನು ಕಾಂಟಾಕ್ಟ್ ಮಾಡಿದಾಗ, ಅವರು ನನ್ನ ಮನೆಗೆ ಬಂದು ನನ್ನ ಹತ್ತಿರ ಮಾತನಾಡಿದ ಮೇಲೆ ಅವರು ಕ್ರಮ ತೆಗೆದುಕೊಂಡ ಮೇಲೆ ಎರಡು ಚೆಕ್‌ಗಳನ್ನು ವಾಪಸ್ಸು ಕೊಡಿಸಿದ್ದಾರೆ. ಮೊದಲು ಬಿಳಿ ಪೇಪರ್ ಮೇಲೆ ಸಹಿ ಮಾಡಿದ್ದನ್ನು ವಾಪಸ್ಸು ಕೊಟ್ಟಿಲ್ಲ. ಹೆಂಡತಿಯ ಮೈಮೇಲಿದ್ದ ಆಭರಣಗಳನ್ನು ಒತ್ತೆಯಿಟ್ಟು 5 ಸಾವಿರ ಕೊಟ್ಟಿದ್ದಾರೆ ಅದನ್ನು ಕೇಳಿದಾಗ ಮೊದಲು ಕೊಡುವುದಿಲ್ಲವೆಂದರು. ನಾನು ಬೆದರಿಸಿ ಹೇಳಿದೆ. ನೀವು ನ್ಯಾಯಸಮ್ಮತವಾಗಿ, ಧರ್ಮವಾಗಿ ವಾಪಸ್ಸು ಕೊಡಲಿಲ್ಲವೆಂದರೆ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿ ಮುಖ್ಯಮಂತ್ರಿಗಳ ಟೇಬಲ್ ಮೇಲೆ 5 ಸಾವಿರ ರೂಪಾಯಿ ಬರುವ ಹಾಗೆ ಮಾಡುತ್ತೇನೆಂದು ಬೆದರಿಸಿದ ಮೇಲೆ ಇವತ್ತು 4 ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ನಿನ್ನೆ ರಾತ್ರಿ ಫೋನ್ ಮಾಡಿದ್ದಾರೆ. ಹೀಗೆ ಬೆಂಗಳೂರು ನಗರದ ಠಾಣೆಗಳಲ್ಲಿ ಇಂತಹ ಅವ್ಯವಹಾರಗಳು, ಅಕ್ರಮಗಳು ನಡೆಯುತ್ತಿವೆ ಎಂದರೆ ಇನ್ನು ದೂರ ದೂರ ಪ್ರದೇಶಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುವುದೇನೆಂದರೆ ಪೊಲೀಸ್ ಠಾಣೆಗಳಲ್ಲಿ ಯಾವ ರೀತಿ ಉಸ್ತುವಾರಿ ಇದೆ, ಎಲ್ಲೆಲ್ಲಿ ಇದೆ, ಈ ರೀತಿ ನಡೆಯದಂತೆ ಏನು ಮಾಡುತ್ತಿದ್ದಾರೆ, ಇದು ನಡೆದಿದ್ದರೆ ಈ ರೀತಿ ನಡೆಯುವುದಕ್ಕೆ ಏಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮೇಲಧಿಕಾರಿಗಳು ಏನು ಮಾಡುತ್ತಿದ್ದಾರೆ ? 15 ದಿವಸ, 1 ತಿಂಗಳಿಗೆ

ಒಂದು ಸಲ ಮೇಲಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋಗುತ್ತಿದ್ದಾರಲ್ಲ ಏನು ಇನ್ಸ್‌ಪೆಕ್ಷನ್ ಮಾಡಿದ್ದಾರೆ ಈ ಅಕ್ರಮಗಳು ದೌರ್ಜನ್ಯಗಳು ನಡೆದಿರುವುದನ್ನು ನೋಡಿದ್ದಾರೆಯೆ ಎಂದು ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಮೇಲಧಿಕಾರಿಗಳನ್ನು ಬರ ಮಾಡಿಕೊಂಡು ಅವರ ಸಭೆಯಲ್ಲಿ ಈ ವಿಷಯವಾಗಿ ಚರ್ಚೆ ಮಾಡಿ ಇನ್ನು ಮುಂದೆ ಯಾವುದೇ ಒಂದು ಠಾಣೆಯಲ್ಲಿ ಅಮಾಯಕರ ಮೇಲೆ ಅತ್ಯಾಚಾರ, ಅನ್ಯಾಯಗಳು ಹಲ್ಲೆ ಆಗದಿರುವಂತೆ ನೋಡಿಕೊಂಡು ಸಾರ್ವಜನಿಕರಿಗೆ ಪೊಲೀಸ್ ಠಾಣೆಗಳ ಬಗ್ಗೆ ವಿಶ್ವಾಸ, ನಂಬಿಕೆ ಬರುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತಿದ್ದೇನೆ.

ಇನ್ನು ಪವರ್ ಜನರೇಷನ್ ಮತ್ತು ಡಿಸ್ಟ್ರಿಬ್ಯೂಷನ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಕಬ್ಬನ್‌ಪೇಟೆ, ಸಂಪಂಗಿರಾಮನಗರ, ಶಿವಾಜಿನಗರ, ಶಾಂತಿನಗರ, ಮೈಸೂರು ಬ್ಯಾಂಕ್, ಬಳೇಪೇಟೆ – ಇಲ್ಲಿ ಸಾಕಷ್ಟು ಜನ ನೇಯ್ಗೆಯವರು ಇದ್ದಾರೆ. ಅವರಲ್ಲಿ ಬಹಳ ಬಡವರೂ ಇದ್ದಾರೆ, ಬಹಳ ಅನುಕೂಲಸ್ಥರೂ ಇದ್ದಾರೆ. ಬಹಳ ಅನುಕೂಲಸ್ಥರಿಗೆ ಯಾವ ರೀತಿಯಲ್ಲೋ ಪವರ್ ಸಪ್ಲೈಯಾಗುತ್ತದೆ. ಆದರೆ ಕಡು ಬಡವರು ಒಂದೆರಡು ಪವರ್ ಲೂಮ್ಸ್ ಇಟ್ಟುಕೊಂಡಿರುತ್ತಾರೆ, ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪವರ್ ಸಪ್ಲೈಯಾಗುತ್ತಿಲ್ಲ. ದಿನಗೂಲಿಯ ಮೇಲೆ ಕೆಲಸ ಮಾಡುವವರಿಗೆ ಸಂಬಳ ಕೊಡುವಷ್ಟಕ್ಕೂ ಪವರ್ ಸಪ್ಲೈಯಾಗುತ್ತಿಲ್ಲ. ಅವರು ಉತ್ಪಾದನೆ ಮಾಡಿ ವ್ಯಾಪಾರ ಮಾಡಿ ಬದುಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪವರ್ ಸಪ್ಲೈ ಸರಿಯಾದ ರೀತಿಯಲ್ಲಿ ರ್‍ಯಾಷನಲೈಸ್ ಮಾಡಿ ಹಂತ ಹಂತಗಳಲ್ಲಿ ಯೂನಿಫಾರಂ ಆಗಿ ಯಾವ ಸಮಯದಲ್ಲಿ ಪವರ್ ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ಕೆ.ಇ.ಬಿ.ಯವರು ತೀರ್ಮಾನ ಮಾಡುವುದು ಸೂಕ್ತವೆಂದು ಪವರ್ ಮಿನಿಸ್ಟರ್ ಅವರಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಅವರು ಪ್ರತ್ಯೇಕವಾಗಿ ಒಂದು ಸಭೆಯನ್ನು ಕರೆದಾಗ ನಾನು ಹೇಳಿದ್ದೇನೆ. ಈಗ ಮತ್ತೆ ಅದನ್ನೇ ಹೇಳುತ್ತೇನೆ. ಪವರ್ ಸಪ್ಲೈ ಇರ್‍ರ್ಯಾಷನಲ್ ಆಗಿ ಡಿಸ್ಕ್ರಿಮಿನೇಟಾಗಿ ಡಿಸ್ಟ್ರಿಬ್ಯೂಟ್ ಆಗುತ್ತಿರುವುದರಿಂದ ಜನಸಾಮಾನ್ಯರಿಗೆ ಅದರಲ್ಲೂ ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ಬಹಳ ತೊಂದರೆಯಾಗುತ್ತಿದೆ. ಆಮೇಲೆ ಪವರ್ ಲೀಕ್ ಮತ್ತು ಪವರ್ ಥೆಫ್ಟ್ ಆಗುತ್ತಿರುವ ಬಗ್ಗೆ ಹೇಳುತ್ತಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳವರು ಕೆ.ಇ.ಬಿ.ಗೆ ಲಕ್ಷಾಂತರ ರೂಪಾಯಿ ನಷ್ಟವಾಗುವ ರೀತಿಯಲ್ಲಿ ಪವರನ್ನು ಕಳ್ಳತನ ಮಾಡುತ್ತಾರೆ. ಅವರ ಮೇಲೆ ಶಿಸ್ತು ಕ್ರಮವನ್ನು ತೀವ್ರವಾಗಿ ಏತಕ್ಕೆ ತೆಗೆದುಕೊಳ್ಳುತ್ತಿಲ್ಲ? ಒಂದು ರೀತಿ ಅವರ ಮೇಲೆ ರೈಡ್ ಮಾಡಿದರೂ ಕ್ರಮ ತೆಗೆದುಕೊಂಡಿದ್ದು ಸಾರ್ವಜನಿಕರಿಗೆ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಈ ಸಂದರ್ಭದಲ್ಲಿ ಅವರನ್ನು ಕೇಳಬಯಸುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ. ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಔಷಧಿಗಳು ಇದ್ದರೂ ಸರಿಯಾದ ರೀತಿಯಲ್ಲಿ ರೋಗಿಗಳಿಗೆ ವಿತರಣೆಯಾಗುತ್ತಿಲ್ಲ. ಉದಾಹರಣೆಗೆ ಬೋರಿಂಗ್ ಅಂಡ್ ಲೇಡಿಕರ್ಜನ್ ಆಸ್ಪತ್ರೆಯಲ್ಲಿ ಸಾರ್ಕ್ ನಡೆದ ಸಮಯದಲ್ಲಿ ಒಳ್ಳೆಯ ಎಕ್ಯುಪ್‌ಮೆಂಟ್‌ಗಳನ್ನು ತಂದರು. ಅಲ್ಟ್ರಾಸೌಂಡ್ ಯೂನಿಟ್, ಇಂಡೋ ಸ್ಕೋಪಿಕ್ ಯೂನಿಟ್, ಡಯಾಲಿಸಿಸ್ ಯೂನಿಟ್ – ಹೀಗೆ ಸಾಕಷ್ಟು ತಂದರು. ಒಳ್ಳೆಯ ಎಕ್ವಿಪ್‌ಮೆಂಟ್ಸ್ ಒಳ್ಳೆಯ ಆಧುನಿಕವಾಗಿ ಬಹಳ ಚೆನ್ನಾಗಿ ಮಾಡಿದರು. ಫೈವ್ ಸ್ಟಾರ್ ಟ್ರೀಟ್‌ಮೆಂಟ್ ಕೊಡುವುದಕ್ಕಿಂತ ಹೆಚ್ಚು ಟ್ರೀಟ್‌ಮೆಂಟ್ ಕೊಡುವ ರೀತಿಯಲ್ಲಿ ಮಾಡಿದರು. ಏಕೆಂದರೆ, ಅವೊತ್ತು ಬೇರೆ ಬೇರೆ ರಾಷ್ಟ್ರಗಳ ಪ್ರಧಾನ ಮಂತ್ರಿಗಳು, ಮಂತ್ರಿಗಳು ದೊಡ್ಡ ದೊಡ್ಡ ಅಧಿಕಾರಿಗಳು ಬರುತ್ತಾರೆ, ನಮ್ಮ ಪ್ರಧಾನ ಮಂತ್ರಿಗಳು ಬರುತ್ತಾರೆಂದು ಮಾಡಿದರು. ಅದು ಆದ ಮೇಲೆ ಅವೊಂದು ಎಕ್ಯುಪ್‌ಮೆಂಟ್‌ಗಳನ್ನು ಯಾವ ಉದ್ದೇಶಕ್ಕೆ ತಂದರೊ, ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಯೋಚನೆ ಮಾಡಿದ್ದರೋ ಅದೆಲ್ಲ ಇವತ್ತು ಬಹಳ ಕಡಿಮೆ ದರ್ಜೆಗೆ ಇಳಿದು ಹೋಗಿದೆ.

ಅವನ್ನು ರಿಪೇರಿ ಮಾಡಬೇಕು ಎಂದು ಅಲ್ಲಿನ ಸೂಪರಿಂಟೆಂಡೆಂಟ್ ಸರ್ಕಾರಕ್ಕೆ ಕಾಗದ ಬರೆದರೆ, ಸರ್ಕಾರದಿಂದ ಸಮಂಜಸವಾದಂತಹ ಉತ್ತರವೇ ಬರುವುದಿಲ್ಲ. ಇವತ್ತಿನ ಪರಿಸ್ಥಿತಿಯನ್ನು ನಾನು ಹೇಳುವುದಾದರೆ, ಅಲ್ಲಿನ ಸುಪರಿಂಟೆಂಡೆಂಟ್ ಹತ್ತಿರ ಕ್ಯಾಷ್ ಬ್ಯಾಲೆನ್ಸ್ ನಿಲ್‌ಗೆ ಬಂದಿದೆಯೆಂತೆ. ಮೂರು ದಿನದ ಕೆಳಗೆ ಅವರ ಹತ್ತಿರ 18 ರೂಪಾಯಿ. ಕ್ಯಾಷ್ ಬ್ಯಾಲೆನ್ಸ್ ಇತ್ತಂತೆ. ಅವರ ಕೈಯಲ್ಲಿ ಹಣವೇ ಇಲ್ಲ ಎಂದರೆ ಅವರು ಯಾವ ರೀತಿ ರೋಗಿಗಳಿಗೆ ಮದ್ದನ್ನು ಮತ್ತು ಇಂಜೆಕ್ಷನ್‌ನ್ನು ಕೊಂಡುಕೊಳ್ಳುವುದಕ್ಕೆ ಬರುತ್ತದೆ. ಯಾವ ರೀತಿಯಲ್ಲಿ ರೋಗಿಗೆ ಕೊಡಬೇಕಾದಂತಹ ಒಂದು ಟ್ರೀಟ್‌ಮೆಂಟ್ ಕೊಡುವುದಕ್ಕೆ ಸಾಧ್ಯ ಆಗುತ್ತದೆ. ಮನಸ್ಸಿಗೆ ಬಹಳ ನೋವಾಗುವಂತಹ ಒಂದು ಪರಿಸ್ಥಿತಿ ಅಲ್ಲಿ ಇದೆ. ಆದುದರಿಂದ ನಾನು ತಮ್ಮ ಮೂಲಕ ಕಳಕಳಿಯಿಂದ ಬೇಡಿಕೊಳ್ಳುವುದೇನೆಂದರೆ, ಯಾವುದೇ ಒಂದು ಆಸ್ಪತ್ರೆ ನಿರ್ಮಾಣ ಮಾಡುವುದಾಗಿರಲಿ, ಅಲ್ಲಿಗೆ ಹೆಚ್ಚುವರಿ ಡಾಕ್ಟರ್‌ಗಳನ್ನು ಪೋಸ್ಟ್ ಮಾಡುವುದಾಗಿರಲಿ ಅಥವಾ ಟ್ರಾನ್ಸ್‌ಫರ್ ಮಾಡುವುದಾಗಿರಲಿ, ಸ್ಪೆಷಲಿಸ್ಟ್ ಅನ್ನು ಮಾಡುವುದಾಗಿರಲಿ ಮಾಡಿದ ಮೇಲೆ ಅವರಿಂದ ಸೂಕ್ತವಾದ ಪ್ರಮಾಣದಲ್ಲಿ ಕೆಲಸ ತೆಗೆದುಕೊಳ್ಳಬೇಕು, ಮತ್ತು ರೋಗಿಗಳಿಗೆ ಅನುಕೂಲವಾದಂತಹ ಚಿಕಿತ್ಸೆ ಆಗಬೇಕು. ಅದನ್ನು ಮಾಡುವುದಕ್ಕೆ ಆಗಲಿಲ್ಲ ಎಂದರೆ ಏಕೆ ಆಗಲಿಲ್ಲವೆಂದು ನಮ್ಮ ಸರ್ಕಾರ ತೀವ್ರವಾಗಿ ಗಮನಹರಿಸಬೇಕು. ಏಕೆ ಸೆಕ್ರೆಟರಿ ಲೆವೆಲ್‌ನಲ್ಲಿ ಆಗುತ್ತಿಲ್ಲ, ಡೈರೆಕ್ಟರ್ ಲೆವೆಲ್‌ನಲ್ಲಿ ಆಗುತ್ತಿಲ್ಲ, ಆಸ್ಪತ್ರೆ ಸೂಪರಿಂಟೆಂಡೆಂಟ್ ಲೆವೆಲ್‌ನಲ್ಲಿ ಆಗುತ್ತಿಲ್ಲ ಎಂದು ಗಮನಿಸಬೇಕಾಗಿ ಬರುತ್ತದೆ. ನಾನು ಬಹಳವಾಗಿ ವಿಚಾರಣೆ ಮಾಡಿದಾಗ, ಮೇಲುಗಡೆ ಇರುವ ಅಧಿಕಾರಿಗಳಿಗೂ ಮತ್ತು ಅಲ್ಲಿನ ಸೂಪರಿಂಟೆಂಡೆಂಟ್ ಅವರಿಗೂ ಸರಿಯಾದ ಹೊಂದಾಣಿಕೆ ಇಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಹೊಂದಾಣಿಕೆ ಇಲ್ಲದಂತಹ ಉಸ್ತುವಾರಿ ಮೇಲು ವರ್ಗ ಏಕೆ ಇರಬೇಕು, ಮೇಲಿನ ಅಧಿಕಾರಿಗಳು ಏಕೆ ಇರಬೇಕು. ಆಸ್ಪತ್ರೆಗಳಲ್ಲಿ ಜನತೆಯನ್ನು ತಬ್ಬಲಿಗಳನ್ನಾಗಿ ಏತಕ್ಕಾಗಿ ಮಾಡಬೇಕು, ಇದರ ಬಗ್ಗೆ ನಾವು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಮೊನ್ನೆ ನನಗೆ ಒಂದು ವಿಷಯ ತಿಳಿದು ಬಂತು. ನಾವು ಸಾರ್ಕ್ ಟೈಂನಲ್ಲಿ ಎಕ್ವಿಪ್‌ಮೆಂಟ್ಸ್ ತೆಗೆದುಕೊಂಡು ಬಂದಾಗ, ನಮ್ಮಲ್ಲಿ ಸೂಕ್ತವಾದಂತಹ ಟ್ರೈಂಡ್ ಪ್ರೊಫೆಷನಲ್ಸ್, ಆ ಎಕ್ವಿಪ್‌ಮೆಂಟ್ಸ್‌ನ್ನು ಉಪಯೋಗ ಮಾಡುವಂತಹವರು ಇರಲಿಲ್ಲ. ತದನಂತರ ಸಾಧಾರಣವಾಗಿ ಏನೋ ಒಂದು ಟ್ರೈನಿಂಗ್ ಕೊಟ್ಟಿದ್ದಾರೆ. ಅದು ಕೆಟ್ಟು ಹೋದರೆ ಸರಿ ಮಾಡುವವರು ಇಲ್ಲ. ಯಾರು ಈ ಎಕ್ವಿಪ್‌ಮೆಂಟ್ಸ್‌ನ್ನು ಸಪ್ಲೈ ಮಾಡಿದ್ದಾರೆ ಅವರಿಂದ ಸರಿ ಮಾಡಿಸಿಕೊಳ್ಳುವುದಕ್ಕೆ ಸರಿಯಾದ ಒಂದು ಕ್ರಮವನ್ನು ವಹಿಸಲಿಲ್ಲ. ಅಂದ ಮೇಲೆ ಇದರಿಂದ ಯಾರಿಗೆ ತೊಂದರೆ ಆಗುತ್ತಾ ಇದೆ. ಆಸ್ಪತ್ರೆಗಳ ವಿಷಯ ಈ ರೀತಿ ಇದೆ. ನಾನು ಮೂರು ವರ್ಷಗಳಿಂದ ಈ ಸದನದಲ್ಲಿ ಕೇಳುತ್ತಿದ್ದೇನೆ. ಇಬ್ಬರೂ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ, ಹೆಲ್ತ್ ಮಿನಿಸ್ಟರ್‌ಗೆ ಹೇಳಿದ್ದೇನೆ. ಒಬ್ಬ ಮಾಜಿ ಅಧ್ಯಕ್ಷರೂ, ಅವರು ಇಲ್ಲೇ ಇದ್ದಾರೆ.

ಬೋರಿಂಗ್ ಹಾಸ್ಪಿಟಲ್‌ನಲ್ಲಿ ಸರಿಯಾದಂತಹ ಒಂದು ಮಾರ್ಚ್ಯುಯರಿ ಇರಬೇಕು. ಸರಿಯಾದಂತಹ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಇರಬೇಕು ಮತ್ತು ಅದಕ್ಕೆ ಪೋಸ್ಟ್ ಮಾರ್ಟಂ ಡಿಪಾರ್ಟ್‌ಮೆಂಟ್ ಇರಬೇಕು. ಅದು ಇಲ್ಲದೇ ಹೋದರೆ ಸಹಸ್ರಾರು ಜನಕ್ಕೆ ಬಹಳ ತೊಂದರೆ ಆಗುತ್ತಾ ಇದೆ. ಅದಕ್ಕಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದೂರದಿಂದ ಬರುವವರ ಕಡೆಗೆ ಗಮನ ಕೊಡುವುದಿಲ್ಲ. ಆ ಮಾರ್ಚುಯರಿಯಲ್ಲಿ ಹೋಗಿ ನೋಡಿದರೆ 8-10-15 ಹೆಣಗಳು ಒಂದರ ಮೇಲೆ ಬಿದ್ದಿರುತ್ತವೆ. ನಾವು ಹೆಣಕ್ಕೆ ಏನು ಗೌರವ ಕೊಡುತ್ತಿದ್ದೇವೆ ಎಂದು ಸರ್ಕಾರಿ ಆಸ್ಪತ್ರೆಯಲ್ಲಿ ಹೋಗಿ ನೋಡಬೇಕಾಗಿದೆ. ಹೆಣದ ವಾರಸುದಾರರು ಯಾರಾದರೂ ಹೋಗಿ ಈ ತರಹ ಹೆಣದ ಮೇಲೆ ಹೆಣ ಬಿದ್ದಿರುವುದನ್ನು ನೋಡಿದರೆ, ಅವರ ಮನಸ್ಸಿನ ಮೇಲೆ ಎಷ್ಟು ಕೆಟ್ಟ ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಇಷ್ಟು

ಅಮಾನವೀಯತೆಯಿಂದ, ಅಮಾನುಷ ರೀತಿಯಲ್ಲಿ ನಾವು ನಡೆದುಕೊಳ್ಳುತ್ತಿದ್ದೇವೆ. ಬೋರಿಂಗ್ ಆಸ್ಪತ್ರೆಯಲ್ಲಿ ಎಲ್ಲಾ ಅನುಕೂಲವಾಗಿದೆ, ಕಟ್ಟಡ ಆಗಿದೆ, ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಆಗಿದೆ. ಆದರೂ ಪೋಸ್ಟ್‌ಮಾರ್ಟಂ ಡಿಪಾರ್ಟ್‌ಮೆಂಟ್‌ನ್ನು ಈವರೆಗೂ ಏತಕ್ಕಾಗಿ ವ್ಯವಸ್ಥೆ ಮಾಡಿಲ್ಲ, ಇದನ್ನು ತಕ್ಷಣ ವ್ಯವಸ್ಥೆ ಮಾಡಬೇಕು, ಮಾಡದೇ ಹೋದರೆ ಜನಕ್ಕೆ ತೊಂದರೆಯಾಗುತ್ತದೆ. ಈ ಒಂದು ಕೆಲಸ ಹಣದುಬ್ಬರದಿಂದ ಮಾಡುತ್ತಿಲ್ಲ ಎಂದು ಹೇಳುವುದರಲ್ಲಿ ಅರ್ಥ ಇಲ್ಲ. ಏಕೆಂದರೆ ಬೋರಿಂಗ್ ಅಂಡ್ ಲೇಡಿ ಕರ್ಜನ್ ಹಾಸ್ಪಿಟಲ್, ರಾಜ್ಯ ಮಟ್ಟದಲ್ಲೇ ಬಹಳ ದೊಡ್ಡ ಆಸ್ಪತ್ರೆ, ಒಳ್ಳೆಯ ಕೀರ್ತಿ ಶ್ರೇಷ್ಟವಾದಂತಹ ಹೆಸರನ್ನು ಪಡೆದಂತಹ ಒಂದು ಆಸ್ಪತ್ರೆ. ಒಳ್ಳೆಯ ಪರಿಣತೆ ಹೊಂದಿದಂತಹ ಡಾಕ್ಟರುಗಳು ಇದ್ದಾರೆ. ಅಂತಹ ಜಾಗದಲ್ಲಿ ಏತಕ್ಕೆ ನಿಮಗೆ ನಂಬಿಕೆ ಇಲ್ಲ. ವಿಕ್ಟೋರಿಯ ಆಸ್ಪತ್ರೆಗೂ, ಬೋರಿಂಗ್ ಆಸ್ಪತ್ರೆಗೂ ಮಲತಾಯಿ ಧೋರಣೆ ಏಕೆ ? ದಯವಿಟ್ಟು ಇದಕ್ಕೆಲ್ಲಾ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ. ನಾನು ಬಹಳ ಮಾತನಾಡಬೇಕಾಗಿತ್ತು. ಆದರೆ ಸಮಯದ ಅಭಾವ ಇರುವುದರಿಂದ ಇಷ್ಟಕ್ಕೇ ನಿಲ್ಲಿಸುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ನಾನು ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ರೈತರನ್ನು ಬಂಧಿಸಿರುವ ವಿಚಾರದಲ್ಲಿ ಅರ್ಧಗಂಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದು ಹೇಳಿಕೆ ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಆ ತರಹ ಹೇಳಿ ಅರ್ಧ ಗಂಟೆಯಲ್ಲಿ ಒಂದು ಗಂಟೆಯಾಯಿತು. ಮಾನ್ಯ ಸದಸ್ಯರ ಭಾಷಣ ಸಹ ಮುಗಿದಿದೆ. ರೈತರು ಬಿಡುಗಡೆಯಾಗುವವರೆಗೆ ಈ ಸದನ ನಡೆಯುವ ಹಾಗೆ ಇಲ್ಲ. ಮುಖ್ಯಮಂತ್ರಿಗಳು ಈ ಸಭೆಗೆ ಬರುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ಸರ್ಕಾರದವರು ಹೇಳಿದ್ದಾರೆ. ಅರ್ಧ ಗಂಟೆಯಲ್ಲಿ ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದರಂತೆ ಹೇಳಿಕೆ ಕೊಡಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮುಖ್ಯಮಂತ್ರಿಗಳು ಬರುತ್ತಾರೆ ಉತ್ತರ ಕೊಡುತ್ತಾರೆ.

† ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಮೆಮೋರಾಂಡಮ್ ಎಂದು ನಾನು ಹೇಳುತ್ತೇನೆ. ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ ರಾಜ್ಯಪಾಲರ ಭಾಷಣ ನೋಡಿದರೆ ಅದರಲ್ಲಿ ಏನೇನೂ ಇಲ್ಲ. ಹಿಂದೆಯೂ ಬಹಳ ನೋಡಿದ್ದೇನೆ. ಈಗ ನೋಡಿದರೆ ಅದರಲ್ಲಿ ಯಾವ ಹುರುಳು ಇಲ್ಲದೇ ಇರತಕ್ಕ ರಾಜ್ಯಪಾಲರ ಭಾಷಣ ಆಗಿದೆ. ಈ ಪದ್ಧತಿಯನ್ನು ಏಕೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಇದು ನಿಜವಾಗಿಯೂ ಬಹಳ ಖಂಡನೀಯವಾದುದು. ಈಗ ತಾವು ಅದರ ಮೇಲೆ ಮಾತನಾಡಲು ತಾವು ಅನುಮತಿ ಕೊಟ್ಟಿದ್ದೀರಿ. ನಾನು ಬಹಳ ಜಾಸ್ತಿ ಮಾತನಾಡುವುದಿಲ್ಲ. ಸ್ವಲ್ಪ ಹೊತ್ತು ಮಾತನಾಡುತ್ತೇನೆ.

ಚೇರ್ಮನ್:– ತಾವು ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾತನಾಡಬಹುದೆಂದರೆ ಬಹಳ ಸಂತೋಷ. ಅವರು ಯಾರೂ ಇರುವುದೇ ಇಲ್ಲ. ಮಂತ್ರಿಗಳು ಜಾಸ್ತಿಯಾಗಿದ್ದಾರೆ. ಯಾರೂ ಇರುವುದಿಲ್ಲ. ನಾವು ಹೇಳುವುದನ್ನು ಅವರು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಸರ್ಕಾರದ ಗತಿ ಏನಾಗಿದೆಯೋ ಗೊತ್ತಿಲ್ಲ. ಸರ್ಕಾರ ಇದೆಯೋ ಇಲ್ಲವೋ ಎಂದು ನಾನು ಕೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರು ಹೇಳುವುದನ್ನು ಯಾರೂ ಕೇಳುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:– ಇಡೀ ಸಭೆಯನ್ನು ಸಂಸದೀಯ ಸಚಿವರಾದ ಹಾರನಹಳ್ಳಿ ರಾಮಸ್ವಾಮಿಯವರಿಗೆ ಬಿಟ್ಟಿದ್ದಾರೆ. ಏಕೆಂದರೆ, ಪಾಪ ಅವರು ಹಿಂದೆ ಬಂದರೆ ಒದೆಯಬೇಡಿ, ಮುಂದೆ

ಬಂದರೆ ಹಾಯಬೇಡಿ. ಆವೊಂದು ಸೌಜನ್ಯವಾಗಿರತಕ್ಕವರು. ಮಾನ್ಯ ಖರ್ಗೆಯವರು ಇಲ್ಲಿ ಕುಳಿತುಕೊಳ್ಳುತ್ತಿದ್ದರು. ಅವರ ಪೀಠ ಯಾವಾಗ ಬದಲಾವಣೆಯಾಯಿತೋ ಗೊತ್ತಿಲ್ಲ, ಅವರು ಹಿಂದಕ್ಕೆ ಹೋಗಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಮುಂದೆ ಕುಳಿತುಕೊಳ್ಳುತ್ತಿದ್ದರು. ಅವರು ಹಿಂದಕ್ಕೆ ಹೋಗಿದ್ದಾರೆ. ಮಾನ್ಯ ಚೌದ್ರಿಯವರು ಹಿಂದಕ್ಕೆ ಹೋಗಿದ್ದಾರೆ. ಒಬ್ಬೊರಿಗೊಬ್ಬರು ಮಾತನಾಡುತ್ತಿದ್ದಾಗ. ಅಧಿಕಾರಿಗಳು ಇರಬೇಕೆಂದು ಇಲ್ಲ, ಅಧಿಕಾರಿಗಳ ಗ್ಯಾಲರಿಯಲ್ಲಿ ಮುಂದಿನ ಕುರ್ಚಿಗಳಲ್ಲಿ ಒಬ್ಬರೂ ಇಲ್ಲ. ಅಲ್ಲಿ ಕುಳಿತಿರುವವರಿಗೆ ನಾವು ಏನು ಹೇಳುತ್ತಿದ್ದೇವೆ ಅದಕ್ಕೆ ಸ್ಪಂದಿಸುತ್ತಾರೋ ಏನೋ ಗೊತ್ತಿಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಪರಿಸ್ಥಿತಿ ಹೀಗಾಗಿದೆ ? ಈ ಸಭೆಯ ವ್ಯವಸ್ಥೆ ಬರುತ್ತಾ ಬರುತ್ತಾ ಈ ಸಭೆಯ ವ್ಯಕ್ತಿತ್ವಕ್ಕೆ ಧಕ್ಕೆ ಬರುವ ರೀತಿ ಸರ್ಕಾರ ನಡೆದುಕೊಳ್ಳುತ್ತಿದೆ. ಇದು ನಿಜವಾಗಿಯೂ ಒಳ್ಳೆಯದಲ್ಲ. ಪಾಪ, ಮಾತು ಎತ್ತಿದರೆ ಸಂಸದೀಯ ಸಚಿವರ ಮೇಲೆ ನಮ್ಮದು ಧಾಳಿಯಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಗುರುಪಾದಪ್ಪನವರು ಹೇಳುವುದು ಅರ್ಥವಾಗುವುದಿಲ್ಲವೆಂದರೆ ಬೀದರ್ ಕನ್ನಡ ಎಂತಲೋ ಹೇಗೆ ?

ಶ್ರೀ ವಾಟಾಳ್ ನಾಗರಾಜ್:- ಏಕೆ ಅರ್ಥವಾಗಲಿಲ್ಲವೆಂದರೆ, ನಮ್ಮ ಗುರುಪಾದಪ್ಪ ನಾಗ್ಮಾರಪಲ್ಲಿಯವರು ಹೇಳತಕ್ಕ ಭಾಷಣವನ್ನು ಕೇಳಿ ಅದನ್ನು ಬರೆದುಕೊಳ್ಳತಕ್ಕವರು ಒಬ್ಬರೂ ಕಾಣಿಸುತ್ತಿಲ್ಲವೆಂದು ಹೇಳಿದ್ದೇನೆ. ಏಕೆಂದರೆ ಒಬ್ಬರೂ ಇಲ್ಲ. ಅದು ಗೋರ್ಕಲ್ಲ ಮೇಲೆ ಮಳೆ ಬಿದ್ದರೆ ಹೇಗೆ ಆಗುತ್ತದೋ ಹಾಗೆ ಆಗಿದ. ನಮಗೆ ಅರ್ಥವಾಗುವುದಿಲ್ಲವೆಂದು ಅಲ್ಲ. ನಾವು ಹೇಗೆ ಬೇಕಾದರೂ ಮಾತನಾಡಿಕೊಳ್ಳುತ್ತೇವೆ. ಯಾರಿಗೆ ಅರ್ಥವಾಗಬೇಕೆಂದರೆ ಅವರು ಹೇಳತಕ್ಕ ಮಾತು ಸರ್ಕಾರಕ್ಕೆ ಅರ್ಥವಾಗಬೇಕು. ರಾಜ್ಯಪಾಲರ ಭಾಷಣದ ಬಗ್ಗೆ ನಾವು ಯಾರ ಮುಂದೆ ಹೇಳಬೇಕು ? ಭಾಷಣವನ್ನು ಯಾರೂ ಕೇಳುವುದಿಲ್ಲ ಮತ್ತು ಬರೆದುಕೊಳ್ಳತಕ್ಕವರೂ ಇಲ್ಲ. ಈ ಪರಿಸ್ಥಿತಿಯಾದರೆ ನಾವು ಯಾರ ಮುಂದೆ ಹೇಳಬೇಕು.

ಚೇರ್ಮನ್:- ಮಾನ್ಯ ಮಂತ್ರಿಗಳಿಗೆ ನೆನಪಿನ ಶಕ್ತಿ ಹೆಚ್ಚು ಇದೆ. ಬರೆದುಕೊಳ್ಳಬೇಕೆಂದೇನೂ ಇಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಾನು ಬರೆದುಕೊಳ್ಳುತ್ತಿದ್ದೆ. ಮಾನ್ಯ ನಾಗರಾಜ್‌ರವರು ಮತ್ತು ಇತರ ಮಿತ್ರರು ಸಂಸದೀಯ ವ್ಯವಹಾರಗಳ ಸಚಿವರು ಬರೆದುಕೊಳ್ಳಬೇಕಾಗಿಲ್ಲ, ಬರೆದುಕೊಳ್ಳುವವರು ಅಲ್ಲಿದ್ದಾರೆಂದು ಹೇಳಿದರು. ಈಗ ಅವರಿಗೆ ಬಿಟ್ಟಿದ್ದೇನೆ. kindly take it in lighter vein.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಂಸದೀಯ ಸಚಿವರು ಹೇಳಿದ ಪ್ರಕಾರ ಕಡತದಲ್ಲಿ ಹೋಯಿತು. ನಾವು ಯಾರೂ ಬರೆದುಕೊಳ್ಳುವುದಿಲ್ಲ ಅವರು ಇದ್ದಾರೆಂದು ಹೇಳಿದರೆ ಹಾಗಾದರೆ ಹೋಗೋಣ ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಹಾಗಾದರೆ ಮಂತ್ರಿಗಿರಿಯನ್ನು ಅವರಿಗೇ ಕೊಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಸರ್ಕಾರ ಇಲ್ಲಿಗೆ ಬಂದು ಬಾವಿಗೆ ಬಿದ್ದು ಹೋಯಿತು. ಅಂದರೆ, ಬಾವಿಯಲ್ಲಿ ಬಿದ್ದುಹೋಯಿತು. ಈ ಪರಿಸ್ಥಿತಿ ಇದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ನೋಡಿ, ನಾನು ಆ ಕಡೆ ಹೇಳಿದ ಹಾಗೆಯೇ ಇದೆ. ಕುಳಿತರೂ

ತಪ್ಪು, ನಿಂತರೂ ತಪ್ಪು. ಮಾಡಿದರೂ ತಪ್ಪು, ಮಾಡದೇ ಇದ್ದರೂ ತಪ್ಪು. ನೀವು ಸರಿ ಅಂತ ಒಂದು ಮಾತು ಹೇಳಿ. ಎರಡು ಮಾತು ತಪ್ಪು ಅಂತ ಹೇಳಿ. ಅದಕ್ಕೆ ಬೆಲೆ ಬರುತ್ತದೆ. ಎಲ್ಲವನ್ನೂ ತಪ್ಪು ಎಂದರೆ ಯಾವುದಕ್ಕೂ ಬೆಲೆ ಬರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಯಾವುಗಾದರೂ ಸರಿಯಾಗಿ ಮಾಡಿದ್ದೀರಿ ಹೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ನಿಮಗೆ ಮಸೀದಿ ಒಡೆಯುವುದು ಬಿಟ್ಟರೆ ಯಾವುದೂ ಒಳ್ಳೆಯದಾಗಿ ಕಾಣುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ನಿಮಗೆ ಹಗಲು ರಾತ್ರಿ ಮಸೀದಿಯದ್ದೇ ಚಿಂತೆಯಾಗಿ ಬಿಟ್ಟಿಬೆಯಲ್ಲ. ನಮಗೆ ಅದೇ ಬೇಜಾರು. ನಿಂತರೂ ಅದೇ, ಕುಳಿತರೂ ಅದೇ. ನಿಮಗೆ ಏಕೆ ಈ ಚಿಂತೆ ಬಂತು ಎಂದು ನಮಗೆ ಅರ್ಥವಾಗುತ್ತಿಲ್ಲ. ಈ ಸದನಕ್ಕೆ ಬರುವವರು ಕೆಲಸ ಇಲ್ಲದೇ ಇರುವವರು ಎನ್ನುವ ಅಭಿಪ್ರಾಯ ಆಗಿದೆ. ಹೊರಗಡೆ ಎಲ್ಲಾ ಕೆಲಸ ಮುಗಿಸಿಕೊಂಡು ಆಮೇಲೆ ಆರಾಮವಾಗಿ ಕೆಲವರು ಸದನಕ್ಕೆ ಬರುತ್ತಾರೇನೋ ಎನ್ನುವ ಪರಿಸ್ಥಿತಿಯನ್ನು ಈ ಸರ್ಕಾರ ತಂದುಬಿಟ್ಟಿದೆ. ಇದು ನಿಜಕ್ಕೂ ನಾಚಿಕೆಗೇಡಿತನ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಒಂದು ಪ್ರಶ್ನೆ ಏನಾಗಿದೆ ಎಂದರೆ, ಇವರು ಬಹಳ ಗೊಂದಲಕ್ಕಂತೂ ಸಿಕ್ಕಿದ್ದಾರೆ. ಅದನ್ನು ತಾವು ಒಪ್ಪುತ್ತೀರಿ. ಇಲ್ಲಿರುವ ಬಹುತೇಕ ಜನ ಒಪ್ಪುತ್ತಾರೆ. ಇವತ್ತು ಪತ್ರಿಕೆಯಲ್ಲಿ ಮಾಜಿ ಮುಖ್ಯಮಂತ್ರಿಯವರು ದೊಡ್ಡದಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಸರ್ಕಾರವನ್ನು ಕಿತ್ತುಹಾಕುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅವರಲ್ಲೇ ಈ ರೀತಿಯ ಗೊಂದಲ ನಿರ್ಮಾಣವಾಗಿದೆ; ನಿಜವಾಗಿ ಏನು ನಡೆದಿದೆ ಎಂದು ನಮಗೂ ಅರ್ಥವಾಗುತ್ತಿಲ್ಲ. ಮೂರು-ಮೂರು ದಿವಸಕ್ಕೂ ಮುಖ್ಯಮಂತ್ರಿಗಳ ಬದಲಾವಣೆ. ಈಗ ಮಂತ್ರಿಮಂಡಲದ ಗಾತ್ರವನ್ನು ಕಡಿಮೆ ಮಾಡಿಲ್ಲವೆಂದರೆ ನಿಮ್ಮ ಸರ್ಕಾರವನ್ನು ಕೆಳಗಿಳಿಸಿಯೇ ಇಳಿಸುತ್ತೇನೆ ಎಂದು ಅವರು ಬಹಿರಂಗವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಹಾಗೆ ಮಾಡುವುದಕ್ಕೆ ಹೋದರೆ ಎಲ್ಲ ಪಕ್ಷಗಳ ಹುಳುಕುಗಳನ್ನು ತಗೆದುಕೊಂಡು ಹೇಳಬೇಕಾಗುತ್ತದೆ. ಹೀಗೆ ಮಾಡಿದರೆ, ನಮ್ಮ ಕಾಲವನ್ನು ವ್ಯರ್ಥ ಮಾಡಬೇಕಾಗಿ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ಸರ್ಕಾರವನ್ನು ತೆಗೆಯುವುದು, ಬಿಡುವುದು ಅವರವರ ಇಂಟರ್ನಲ್ ಮ್ಯಾಟರ್ ಆಯಿತು. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವರು ಪ್ರೆಸಿಡೆಂಟ್ ರೂಲ್ ಇಂಪೋಸ್ ಮಾಡಿಸುತ್ತೇನೆ ಎಂದು ಹೇಳಿರುವುದು ನಮಗೆಲ್ಲ ಭಯವಾಗಿದೆ. ಇದರಿಂದ ನಮ್ಮ ಹಕ್ಕಿಗೂ ಚ್ಯುತಿಯುಂಟಾಗಿದೆ. ನಮಗೆ ಇದರ ಬಗ್ಗೆ ಚಿಂತನೆ ಇದೆ. ನಿಮ್ಮ ನಿಮ್ಮ ಜಗಳ ಏನಾಗಿದೆ, ಅದು ನಮ್ಮೆಲ್ಲರ ಮೇಲೂ ಪರಿಣಾಮ ಮಾಡುತ್ತಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ನೀವು ಮಂತ್ರಿಮಂಡಲದ ಗಾತ್ರ ಕಡಿಮೆ ಮಾಡುತ್ತೀರಾ ಅಥವಾ ಡಿಸಾಲ್ವ್ ಮಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:- ಗುಂಡೂರಾಯರಿಗೆ ಈಗ ಪ್ರಣಬ್ ಮುಖರ್ಜಿ ಅಲ್ಲಿ ಮಂತ್ರಿಯಾಗಿದ್ದಾರೆ, ದಿನೇಶ್‌ಸಿಂಗ್ ಮಂತ್ರಿಯಾಗಿದ್ದಾರೆ. ಇದೇನು ಪಿತೂರಿ ನಡೆಯುತ್ತಿದೆಯೇ ?

ಸರ್ಕಾರದವರು ವಜಾ ಮಾಡತಕ್ಕಂಥ ಸಂಚು, ಶಾಸನಸಭೆವಜಾ ಆಗಬೇಕು. ಪಿತೂರಿ, ಹೇಳುವುದಾದರೆ ಪರಿಸ್ಥಿತಿ ಏನಾಗಿದೆ ? ನಾವು ಎಂದೆಂದೂ ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು, ಅಧ್ಯಕ್ಷರ ಆಳ್ವಿಕೆ ಬರಬಾರದು ಎಂದು ಹೇಳುವವರು ನಾವು. ಆದರೆ ಈ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ ಪ್ರತಿದಿನ ಅವರ ಪಕ್ಷದ ಮುಖಂಡರುಗಳು ಈ ರೀತಿ ಹೇಳಿಕೆ ಕೊಡುತ್ತಾ ಇದ್ದರೆ, ಏನಾಗಿದೆ ? ಅವರು ಸರ್ಕಾರವನ್ನೇ ವಜಾ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದು ಸರಿ ಅಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ.....

ಶ್ರೀ ಬಿ.ಎಸ್. ಯಡಿಯೂರಪ್ಪ:– ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇಬ್ಬರು ಇದ್ದಾರೆ. ಉಪ ಮುಖ್ಯಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ ಯಾರಾದರೂ ಒಬ್ಬರು ಬರುವುದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ನಾನು ಏಕೆ ಹೇಳಿದೆಯೆಂದರೆ Sri R. Gundu Rao is responsible Member in your Party. He is an ex–Chief Ministe . He is Congress Working Committee Member also. He is an important person of your Party. ಹಾಗಾಗಿ ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್:– ಪ್ರಸ್ತುತ ಸಮಯದಲ್ಲಿ ಅವರು ಸದನದ ಸದಸ್ಯರು ಅಲ್ಲ. ಹೊರಗಡೆ ಅವರು ಅಭಿಪ್ರಾಯ ವ್ಯಕ್ತಪಡಿಸಿದರೆ ಅದಕ್ಕೆ ಏಕೆ ಅಷ್ಟು ಮಹತ್ವ ಕೊಡಬೇಕು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವತ್ತು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ....

ಚೇರ್ಮನ್:– ಗುರುಪಾದಪ್ಪ ಅವರ ಭಾಷಣ ಮುಗಿಯಿತು. ಆಮೇಲೆ ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಗುಂಡೂರಾಯರು ಹೇಳಿದ್ದಾರೆ. ಎಲ್ಲಿ ವಜಾ ಮಾಡುತ್ತಾರೋ ಎಂದು ನಮಗೆ ಭಯವಾಗಿದೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:– ನೀವು ಧೈರ್ಯವಂತರು ಎಂದು ತಿಳಿದುಕೊಂಡಿದ್ದೆ. ಇನ್ನೂ ಎರಡು ವರ್ಷ ಸದಸ್ಯರಾಗಿರುತ್ತೀರಿ. ಇನ್ನು ಚುನಾವಣೆಗೆ ಹೋಗತಕ್ಕಂಥಾದ್ದು 1994ರ ನವೆಂಬರ್‌ಗೆ. ಅದಕ್ಕೆ ಏಕೆ ವಿಚಾರ ಮಾಡುತ್ತೀರಿ; ಹೆದರಬೇಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಂತ್ರಿ ಮಂಡಲದ ಸದಸ್ಯರ ಸಂಖ್ಯೆ 41 ಆಗಿದೆ. ಇಷ್ಟಾದರೂ ಖಾತೆಗಳು ಇನ್ನೂ ಹಾಗೆಯೇ ಇವೆ. ಸಕ್ಕರೆಗೆ ಮಂತ್ರಿ ಇದ್ದಾರೆ. ಬೆಲ್ಲಕ್ಕೆ ಇಲ್ಲ, ಈರುಳ್ಳಿಗೆ ಇಲ್ಲ, ಬೆಳ್ಳುಳ್ಳಿಗೆ ಇಲ್ಲ; ಹುಣಸೆಹಣ್ಣಿಗೆ ಇಲ್ಲ. ಇಷ್ಟೊಂದು ಖಾಲಿ ಇವೆ. ಇಷ್ಟು ಮಂತ್ರಿಗಳಿದ್ದರೂ ಇಲ್ಲಿ ಇಬ್ಬರು–ಮೂವರು ಮಾತ್ರ ಇದ್ದಾರೆ. ಎಲ್ಲಾ ಮಂತ್ರಿಗಳು ಇಲ್ಲಿ ಒಂದು ಸಾರಿಯಾದರೂ ಇರುತ್ತಾರಾ ? 41 ಜನ ಮಂತ್ರಿಗಳು ಇಲ್ಲಿ ಕುಳಿತುಕೊಂಡರೂ ಕೋರಮ್ ಆಗುತ್ತದೆ. ಮೊನ್ನೆ ಕೋರಂ ಇಲ್ಲದೆ ತಾವು ಸಭೆಯನ್ನು ಮುಂದಕ್ಕೆ ಹಾಕಿದ್ದೀರಿ. ಸದನಕ್ಕೆ ಮಂತ್ರಿಗಳೇ ಬರುವುದಿಲ್ಲ. ಏನೋ ನಡೆಯುತ್ತಿದೆ ಎನ್ನುವುದಂತೂ ಖಚಿತವಾಗಿದೆ. ಗುಂಡೂರಾಯರು ಹೇಳಿದ ಮಾತಿನಲ್ಲಿ ಸತ್ಯಾಂಶ ಇದೆಯೆಂಬುದು ಈ ಸಂದರ್ಭದಲ್ಲಿ ಕಾಣುತ್ತದೆ.

ಸನ್ಮಾನ್ಯ ಅಧ್ಯಕ್ಷರೇ, ಈಗ ನೋಡಿದರೆ ಜನರಿಗೆ ಎಷ್ಟು ಕಷ್ಟವಾಗಿದೆ. ಹಳ್ಳಿಯಲ್ಲಿ ಯುವಕರ ಗತಿ ಏನಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದರು, ಸಂತೋಷ. ತಾವು ಬಂದರೆ ನಮಗೆ ಸಂತೋಷ ತಾವು ಬಂದರೆ ಸಮಾಧಾನ. ಒಂದು ಕಡೆ ರೈತರಿಗೆ ಕಷ್ಟ, ಒಂದು ಕಡೆ ಸರ್ಕಾರದಲ್ಲಿ ದುಡ್ಡು ಇಲ್ಲ. ಪರಿಸ್ಥಿತಿ ಎಷ್ಟು ಕೆಟ್ಟುಹೋಗಿದೆ ಎಂದರೆ, ಜಿಲ್ಲಾಪರಿಷತ್ತಿಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ; ಅಲ್ಲಿ ಹೋದರೆ, ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುವುದಕ್ಕೆ ಹಣ ಇಲ್ಲ, ಯಾವ ರೋಡಿಗೂ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಇವತ್ತು ರೋಡುಗಳ ಮೇಲೆ ನಡೆಯುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ರೋಡುಗಳ ಮೇಲೂ ಮೊಣಕಾಲು ಉದ್ದದ ಗುಳಿಗಳು ಬಿದ್ದಿವೆ. ಯಾವ ಒಂದು ರೋಡೂ ಸರಿ ಇಲ್ಲ. ಯಾವಾಗ ಈ ಪರಿಸ್ಥಿತಿ ಸರಿಹೋಗುತ್ತದೆ, ಮಂತ್ರಿಮಂಡಲವನ್ನು ಹೆಚ್ಚಿಸಿವರೆ ಸರಿಹೋಗುತ್ತದೆಯೇ ಅಥವಾ ರೋಡ್ ಬಗ್ಗೆ, ನೀರಾವರಿ ಬಗ್ಗೆ ಏನಾದರೂ ಯೋಜನೆಗಳು ಇವೆಯೋ ಎಂಬುದನ್ನು ತಾವು ಹೇಳಬೇಕು. ರೈತರ ಬಗ್ಗೆ ಯಾವ ಯೋಜನೆಗಳೂ ಇಲ್ಲ, ನೀರಾವರಿ ಬಗ್ಗೆ ಇಲ್ಲ. ಇಂತಹ ಗತಿ ಒದಗಿ ಬಂದರೆ ಏನಾಗುತ್ತದೆ. ಮೊನ್ನೆ ನಾನು ಊರಿಗೆ ಹೋಗಿ, ಇವತ್ತು ಬೆಳಿಗ್ಗೆ ಬಂದಿದ್ದೇನೆ. ಅಲ್ಲಿ ನೋಡಿದರೆ ಕುಡಿಯುವುದಕ್ಕೆ ನೀರು ಇಲ್ಲ, ಜನ ಬೇಕಾದಷ್ಟು ಗಲಾಟೆ ಮಾಡುತ್ತಿದ್ದಾರೆ, ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಕುಡಿಯುವುದಕ್ಕೆ ನೀರು ಇಲ್ಲ, ನಾಳೆಯ ಗತಿ ಏನಾಗುತ್ತದೆ? ಇನ್ನು ಒಂದು ತಿಂಗಳು ಹೋದರೆ ನೀರೇ ಸಿಗುವುದಿಲ್ಲ. ನಾನು ಮೊದಲೂ ಕೂಡ ಈ ಸಭೆಯಲ್ಲಿ ಹೇಳಿದ್ದೇನೆ. ನೀರಿನ ಪರಿಸ್ಥಿತಿ ಗಂಭೀರವಾಗಿದೆ, ಎಲ್ಲೆಲ್ಲಿ ಗಂಭೀರವಾಗಿದೆ ಅಂತಹ ಊರುಗಳಲ್ಲಿ ನೀರಿನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಇವರ ಬಗ್ಗೆ ವ್ಯವಸ್ಥೆ ಮಾಡಬೇಕೆಂದೂ ಹೇಳಿದ್ದೇನೆ. ಇವತ್ತಿಗೂ ಕೂಡ ಇದರ ಬಗ್ಗೆ ಯಾರ್ಯ್ಯಾರೂ ಗಮನಹರಿಸಿಲ್ಲ. ಈ ವಿಚಾರವಾಗಿ ಯಾರೂ ಹೋಗುವ ಹಾಗಿಲ್ಲ. ನೋಡುವ ಹಾಗಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ದುಡ್ಡಿಲ್ಲವೆಂದು ಹೇಳುತ್ತಾರೆ, ಇಂತಹ ಪರಿಸ್ಥಿತಿ ಇದೆ. ಒಂದು ಕಡೆ ಸರ್ಕಾರದವರು ನೀರಿನ ಬಗ್ಗೆ ಬೇಕಾದಷ್ಟು ಹಣ ಇದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋದರೆ, ನೀರಿಗೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿಗೆ ಹಣ ಕೊಡಲೇಬೇಕು, ಇದನ್ನು ಇನ್ನೂ ಯಾವಾಗ ಕೊಡುವುದು. ಗಾಳಿ ದೇವರು ಕೊಡುತ್ತಾನೆ, ನೀರನ್ನು ಸರ್ಕಾರದವರು ಒದಗಿಸಬೇಕು. ಇನ್ನು ರೋಡ್ ಬೇಕು, ಬಸ್ ಬೇಕು, ರೈತರು, ಜನಸಾಮಾನ್ಯರು ತಿರುಗಾಡುವುದಕ್ಕೆ ಬಸ್ ಬೇಕು. ಒಂದು ಕಡೆ ಬಸ್ ಬೇಡ, ಒಂದು ಕಡೆ ರೋಡ್ ಬೇಡ, ಒಂದು ಕಡೆ ಅಣೆಕಟ್ಟು ಕಟ್ಟಿಸಿಲ್ಲ, ಒಟ್ಟಿನಲ್ಲಿ ಯಾವುದೂ ಇಲ್ಲ. ನೀರಾವರಿ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಏನು ಗತಿಯಾಗಿದೆ ಎಂದರೆ, ನಮ್ಮಲ್ಲಿ ನೀರಾವರಿ ಬಹಳ ಇದೆ. ಮೊನ್ನೆ ನಾನು ಪ್ರಶ್ನೆ ಕೇಳಿದಾಗ ಉತ್ತರವನ್ನೂ ಕೊಟ್ಟಿದ್ದಾರೆ. ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬರತಕ್ಕಂಥಾದ್ದು ಗೋದಾವರಿ ಬೇಸಿನ್ ಒಂದೇ. ಕೃಷ್ಣಾ, ಕಾವೇರಿ ಯಾವುದೂ ಬರುವುದಿಲ್ಲ. ಬೀದರ್ ಜಿಲ್ಲೆಯಲ್ಲಿ ಬರತಕ್ಕಂಥಾದ್ದು, ಸಣ್ಣದು ಒಂದೇ ಒಂದು ಗೋದಾವರಿ. ಇದರ ಬಗ್ಗೆ ಪ್ರಶ್ನೆ ಕೇಳಿದರೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ಬಚಾವತ್ ಅವಾರ್ಡ್ ಪ್ರಕಾರ 17 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಇದೆ. ಇದರ ಬಗ್ಗೆ ಇವತ್ತಿಗೂ ನಮ್ಮಲ್ಲಿ ಮಾಹಿತಿ ಇಲ್ಲವೆಂದು ಹೇಳಿದ್ದಾರೆ. ನಿಜಾಂಶ ಒಳಗಡೆ ಎಷ್ಟು ನೀರು ಹೋಗುತ್ತದೆಯೋ, ಹೊರಗಡೆ ಎಷ್ಟು ನೀರು ಹೋಗುತ್ತದೆಯೋ ಗೊತ್ತಿಲ್ಲ. ಬಚಾವತ್ ಅವಾರ್ಡ್ ಪ್ರಕಾರ ಯಾವ ಯಾವ ಕೆರೆಗಳಿಗೆ ನೀರು ಹೋಗಬೇಕೆಂದು ಕೇಳಿದರೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ನಾನು ಹಳಿದೆ, 2-50 ಟಿ.ಎಂ.ಸಿ. ನೀರು ಏನು ಇದೆ, ಅವರಲ್ಲಿ 0-65 ಉಪಯೋಗ ಮಾಡಿದ್ದೇವೆ, ಇನ್ನು 1.85 ಹಾಗೆಯೇ ಉಳಿದಿದೆ, ಇದನ್ನು ಯಾವಾಗ ಉಪಯೋಗ ಮಾಡುತ್ತೀರಿ ಎಂದು ಕೇಳಿದೆ. ಇದರ ಬಗ್ಗೆ ಇವತ್ತಿಗೂ ಉತ್ತರ ಇಲ್ಲ ಮತ್ತು ಯಾವಾಗ ಉಪಯೋಗ ಮಾಡುತ್ತೇವೆ ಎಂಬುದನ್ನೂ ಹೇಳುವುದಿಲ್ಲ. ಇನ್ನು ಕಾರಂಜಾ ಯೋಜನೆ ಎಷ್ಟು ವರ್ಷವಾಯಿತು, ಇನ್ನೂ ಮಾಡುತ್ತಲೇ ಇದ್ದಾರೆ. 1991ರಲ್ಲಿ, ಇದರ ಬಗ್ಗೆ ಉತ್ತರವೇ ಇಲ್ಲ. 1992ರಲ್ಲಿ ನೀವು ಉತ್ತರ

ಹೇಳುವುದಕ್ಕೆ ತಯಾರಿಲ್ಲ, ಉತ್ತರವನ್ನು ಒದಗಿಸಿಲ್ಲ. ನಾನು ಇದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ. 1984 ರಿಂದ 1992ರವರೆಗಿನ ವಿವರಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ, ಉತ್ತರ ಮಾತ್ರ ಇಲ್ಲ. ಹಿಂದೆ 1989ರವರೆಗೆ ಅದನ್ನು ಕೊಟ್ಟಿದ್ದೀರಿ. ಒಂದು ಸಾರಿ 9 ಕೋಟಿ, ಒಂದು ಸಾರಿ 4 ಕೋಟಿ ಕೊಟ್ಟು ಬರೀ ಜಮೀನು ಖರೀದಿ ಮಾಡುವುದಕ್ಕೆ ಅಥವಾ ಜನರಿಗೆ ಸಂಬಳ ಕೊಡುವುದಕ್ಕೆ ಮಾತ್ರ ಆಗಿದೆಯೇ ಹೊರತು, ನೀರಾವರಿ ಮಾತ್ರ ಯಾವ ಉದ್ಧಾರ ಆಗಿಲ್ಲ. ಅಂದರೆ, 2 ಸಾವಿರ ಇಸವಿಯೊಳಗೆ ನೀರಾವರಿ ಮಾಡುತ್ತಾರೆಯೇ ಅಥವಾ ನಮ್ಮ ಹಕ್ಕು ಹೋಗುತ್ತದೆಯೋ ಎಂಬ ಭಯ ಬಂದಿದೆ. ನಾನು ಪದೇ ಪದೇ ಸರ್ಕಾರಕ್ಕೆ ಹೇಳುತ್ತೇನೆ. ನಮ್ಮಲ್ಲಿರತಕ್ಕ ಸಣ್ಣ ಸಣ್ಣ ನೀರಾವರಿ ....

ಶ್ರೀ ಕೆ.ಹೆಚ್. ರಂಗನಾಥ್:– ಈ ವರ್ಷ ನೀರಾವರಿಗೆ ಬಜೆಟ್ ಅಲಾಟ್‌ಮೆಂಟ್ ಜಾಸ್ತಿ ಇದೆ. ಯಾವಾಗಲೂ ಕೊಡದೇ ಇರುವಷ್ಟು ನೀರಾವರಿಗೆ ಮತ್ತು ಪವರ್‌ಗೆ ಕೊಡಲಾಗಿದೆ. ಸರ್ಕಾರದ ಆದ್ಯತೆ, ನೀರಾವರಿ ಮಾಡಬೇಕು ಪವರ್ ಪ್ರೊಡಕ್ಷನ್ ಹೆಚ್ಚು ಆಗಬೇಕೆಂಬುದೇ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ತಾವು ನೀರಾವರಿ ಹೆಚ್ಚು ಮಾಡಿದರೆ ಬಹಳ ಸಂತೋಷ, ನಾನು ಸ್ವಾಗತಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಆಯವ್ಯಯದಲ್ಲಿ ನೀರಾವರಿಗೆ ಹೆಚ್ಚು ಹಣ ಕೊಟ್ಟಿರುವುದಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಈ ನೀರಾವರಿಗಾಗಿ ಕೆಲಸ ಮಾಡಿರುವುದಕ್ಕೆ ಕೊಡಬೇಕಾದ ಬಾಕಿ ಹಣ ಎಷ್ಟಿದೆ ಎನ್ನುವುದನ್ನೂ ತಿಳಿಸಬೇಕು. ಆಗ ಗೊತ್ತಾಗುತ್ತದೆ. ಇದಕ್ಕೂ ಉತ್ತರ ಕೊಡಬೇಕು. ''ಅಳಿಯನ ಕುರುಡು ಬೆಳಗಾದ ಮೇಲೆ'' ಎಂದ ಹಾಗೆ ಗೊತ್ತಾಗುತ್ತದೆ. ಹೇಮಾವತಿ ಡೀಪ್ ಕಟ್‌ನ ಒಂದೇ ಒಂದು ಚಾನಲ್ ಕೆಲಸಕ್ಕೆ ಸರ್ಕಾರ ಕೊಡಬೇಕಾದ ಹಣ 11 ಕೋಟಿ ರೂಪಾಯಿಗಳು. ಇದೂ ಕೂಡ ತಮ್ಮ ಗಮನದಲ್ಲಿರಲಿ. ಪುಸ್ತಕದ ಬದನೇಕಾಯಿ ಕೊಟ್ಟರೆ, ಸಾರು ಮಾಡುವುದಕ್ಕಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನೀರಾವರಿಗೆ ತಾವು ಹೆಚ್ಚಿನ ಹಣ ಕೊಟ್ಟಿದ್ದೀರಿ, ಸಂತೋಷ. ನಾನು ಕೇಳತಕ್ಕಂಥಾದ್ದು ಇಷ್ಟೇ. ಕೇಳುವುದು; ನಮ್ಮ ಜಿಲ್ಲೆಗೆ ಸಂಬಂಧಿಸಿದ್ದು ಮಾತ್ರ. ಇಡೀ ರಾಜ್ಯದ್ದು ನಾನು ಕೇಳಲಿಲ್ಲ. ಆ ಜಿಲ್ಲೆಯಲ್ಲಿ ಬರತಕ್ಕಂಥ ಗೋದಾವರಿ ಬೇಸಿನ್‌ನಲ್ಲಿ ಬರತಕ್ಕಂಥ 17 ಟಿ.ಎಂ.ಸಿ. ನೀರನ್ನು ಯಾವಾಗ ಉಪಯೋಗ ಮಾಡುತ್ತೀರಿ. ಅದರ ಬಗ್ಗೆ ಪ್ರಶ್ನೆ ಹಾಕಿದರೆ ಉತ್ತರ ಕೊಡತಕ್ಕಂಥ ಸೌಜನ್ಯ ಸರ್ಕಾರಕ್ಕೆ ಇಲ್ಲ. ನಮ್ಮ ಹತ್ತಿರ ಮಾಹಿತಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ದಾಖಲೆಗಳು ಇವೆ. ತಂದು ತೋರಿಸುತ್ತೇನೆ. ಅಂದರೆ ಇವತ್ತಿನವರೆಗೂ ಅದರ ಬಗ್ಗೆ ಎಲ್ಲೆಲ್ಲೂ ಇಲ್ಲ. ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೋ? 26 ಕೆರೆಗಳು ಇವೆ. ಅಧಿಕಾರಿಗಳು, ನಾವು ರಿಪೋರ್ಟ್ ಮಾಡಿ ಕಳುಹಿಸಿದ್ದೇವೆ. ಸರ್ಕಾರದಲ್ಲಿ ಮಾಹಿತಿ ಸಿಗುವುದಿಲ್ಲ. ಅಂದರೆ ಎಂತಹ ಅಸಮಾಧಾನಕರವಾದ ಮಾತು. ನೀರಾವರಿ ಬಗ್ಗೆ ತಾವು ಆದ್ಯತೆ ಕೊಡಬೇಕು. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ ಇವತ್ತು ರೋಡ್‌ಗಳ ಮೇಲೆ ಜನರು ನಡೆಯುವುದಕ್ಕೆ ಆಗುವುದಿಲ್ಲ. ತಾವು ಲೋಕೋಪಯೋಗಿ ಮಂತ್ರಿಗಳಾಗಿದ್ದೀರಿ, ತಮಗೆ ಗೊತ್ತಿದೆ. ಇವತ್ತು ಬೆಳಿಗ್ಗೆ ತಾವು ಹೌದು ನಮ್ಮ ಗಮನಕ್ಕೆ ಬಂದಿದೆ ಎಂದು ಉತ್ತರ ಹೇಳಿದಿರಿ. ಮಡಿಕೇರಿ ಬಗ್ಗೆ ಹೇಳಿದಿರಿ. ರೋಡಿನದು ಬಹಳ ಕೆಟ್ಟ ಪರಿಸ್ಥಿತಿ ಇದೆ ಎಂದು ಹೇಳಿದಿರಿ. ಇದು ಇಡೀ ಎಲ್ಲಾ ಜಿಲ್ಲೆಗಳಲ್ಲೂ ಇದೆ. ಪ್ರತಿ ಜಿಲ್ಲೆಯಲ್ಲಿ ಇಂತಿಷ್ಟು ಕಿಲೋಮೀಟರ್ ಯಾವ ಯಾವ ಲೋಕೋಪಯೋಗಿ ರೋಡ್ ಇದೆ, ಅದನ್ನೆಲ್ಲಾ ಸರಿಪಡಿಸುತ್ತೇವೆ ಎಂದು ಹೇಳಬೇಕು. ಹಳ್ಳಿಯಲ್ಲಿರತಕ್ಕಂಥ ಜನರಿಗೆ ವಿಧಾನಸಭಾ ತೆಗೆದುಕೊಂಡು ಹೋಗಿ ಅಲ್ಲಿ ಇಡಬೇಕಾಗಿಲ್ಲ. ಅವರಿಗೆ ಬೇಕಾಗಿದ್ದು ರೋಡ್, ಬಸ್ಸು, ಶಾಲಾ ಶಿಕ್ಷಕರು, ಅಂಗನವಾಡಿ ಅವರಿಗೆ ಊರಿನಲ್ಲಿ ಏನು ಸೌಲಭ್ಯ ಬೇಕೋ ಅದು ಮಾತ್ರ ಕೊಟ್ಟರೆ ಸಾಕು.

ಅವರು ನಿಮ್ಮನ್ನು ವಿಧಾನಸಭಾ ಕೇಳುತ್ತಾರೋ, ರಾಜ್ಯಸಭಾ ಕೇಳುತ್ತಾರೋ ಅವರು ಏನೂ ಕೇಳುವುದಿಲ್ಲ. ಆ ಸಾಮಾನ್ಯ ಸವಲತ್ತು ತಾವು ಅವರಿಗೆ ಒದಗಿಸಿಕೊಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಕೆಲವು ಕಡೆ ಕೋರ್ಟ್ ಗುಮಾಸ್ತರು ಶಿಕ್ಷಕರು ಇದ್ದಾರೆ. ಕೋರ್ಟ್ ಗುಮಾಸ್ತ ಎಂದರೆ ನಿಮಗೆ ಗೊತ್ತೆ ಇಲ್ಲ. ಒಬ್ಬ ಶಿಕ್ಷಕ ಸಂಬಳ ತೆಗೆದುಕೊಳ್ಳುತ್ತಾನೆ ಅವರು ಸಂಬಳ ತೆಗೆದುಕೊಂಡು ನೂರು ರೂಪಾಯಿ ಕೊಟ್ಟು ಇನ್ನೊಬ್ಬನನ್ನು ಅಲ್ಲಿ ಇಡುತ್ತಾನೆ. ಅವನು ಕೋರ್ಟ್ ಗುಮಾಸ್ತೆ ಎಂದು. ಆ ಊರಿನಲ್ಲಿ ಶಿಕ್ಷಕ ಇರುವುದಿಲ್ಲ. ಈ ಪರಿಸ್ಥಿತಿ ಇದ್ದರೆ ಹೇಗೆ ? ಒಂದು ಕಡೆ ರಾಮರಾಜ್ಯ ಎಂದು ಹೇಳುತ್ತೀರಿ. ಒಂದು ಕಡೆ ಪಂಚಾಯತ್ ರಾಜ್ ಮೇಲೆ ನಿಮಗೆ ವಿಶ್ವಾಸ ಇಲ್ಲ. ನೀವು ಅಮೆಂಡ್‌ಮೆಂಡ್ಸ್ ಎಲ್ಲಾ ಬೇರೆ ಬೇರೆ ಮಾಡುತ್ತಿದ್ದೀರಿ. ಅದನ್ನು ಯಾರೇ ತರಲಿ, ಆದರ ಬಗ್ಗೆ ನಿಮಗಂತೂ ವಿಶ್ವಾಸ ಇಲ್ಲ.

ಅಧಿಕಾರಿ ವಿಕೇಂದ್ರಿಕರಣ ಆದ ಮೇಲೆ ನಿಮಗೆ ಸಮಾಧಾನ ಇಲ್ಲ. ಯಾರೂ ಯಾರಾದರೂ ಬರಲಿ. ನನಗೆ ಅನಿಸಿದ್ದನ್ನು ನಾನು ಹೇಳುತ್ತಿದ್ದೇನೆ. ತಾವು ಕೂಡ ಮೊನ್ನೆ ರೋಜ್‌ಗಾರ್ ಯೋಜನೆ ಬಗ್ಗೆ ಅಮೆಂಡ್‌ಮೆಂಡ್ಸ್ ತಂದರಲ್ಲ ಪಂಚಾಯತಿ ಎಲೆಕ್ಷನ್ ಮಾಡುವುದನ್ನು ಬಿಟ್ಟು ಜಿಲ್ಲಾಧಿಕಾರಿಗಳಿಗೆ ನೀವು ಅಧಿಕಾರ ಕೊಟ್ಟಿರಿ. ಇದು ಅಧಿಕಾರ ವಿಕೇಂದ್ರಿಕರಣ ಮಾಡತಕ್ಕಂಥ ವ್ಯವಸ್ಥೆಯೇ ? ಸರ್ಕಾರದ ಅಧೀನದಲ್ಲೇ ಎಲ್ಲಾ ಇರಬೇಕು. ಜನರ ಕೈಯಲ್ಲಿ ಅಧಿಕಾರ ಇರಬಾರದು. ನಿಜವಾಗಿಯೂ ಜನರ ಪ್ರತಿನಿಧಿಗಳು ಇದ್ದು ಜನರ ಕಷ್ಟವನ್ನು ನೋಡತಕ್ಕಂಥ ವ್ಯವಸ್ಥೆ ಇಲ್ಲಿ ಆಗಬೇಕು. ಆದು ಆಗಿಲ್ಲ. ಒಂದೊಂದೇ ಅಲ್ಲ, ನೀರಾವರಿದು ಆ ಪ್ರಕಾರ, ರೋಡಿನದು ಈ ಪ್ರಕಾರ. ಮೊನ್ನೆ ನಾನು ಡಾಕ್ಟರ್ಸ್ ಬಗ್ಗೆ ಹೇಳಿದೆ. ಹಳ್ಳಿಗಳಿಗೆ ಹೋದರೆ ಡಾಕ್ಟರ್ಸ್ ಇಲ್ಲವೆಂದು ಜನ ನಮ್ಮನ್ನು ಘೇರಾವ್ ಮಾಡುತ್ತಾರೆ. ಯಾವ ಆಸ್ಪತ್ರೆಗಳಲ್ಲೂ ಡಾಕ್ಟರ್ಸ್ ಇಲ್ಲ. ನಮ್ಮಲ್ಲಿ 6 ವರ್ಷಗಳಿಂದ ಡಾಕ್ಟರ್ಸ್ ಇಲ್ಲ. 7 ದಾವಾಖಾನೆಗಳು ಇವೆ. ಅಲ್ಲಿ ಕತ್ತೆಗಳು ಮತ್ತು ನಾಯಿಗಳು ಇರುವುದು. ಆ ದಾವಾಖಾನೆಗಳಲ್ಲಿ ಡಾಕ್ಟರ್ಸ್ ಇಲ್ಲ, ಕಾಂಪೌಂಡರ್ಸ್ ಇಲ್ಲ, ಏನೇನೂ ಇಲ್ಲ. ಔಷಧಿ ಇಲ್ಲ. ಏಕೆ ಈ ರೀತಿ ಆಗುತ್ತಿದೆ, ಎಲ್ಲಿಗೆ ಬಂದಿದೆ ಪರಿಸ್ಥಿತಿ. ತಾವು ಇಷ್ಟೊಂದು ಜನ ಮಂತ್ರಿಗಳನ್ನು ಇಟ್ಟುಕೊಂಡಿದ್ದೀರಿ. ಬರೀ ಮಂತ್ರಿಗಳನ್ನು ಹೆಚ್ಚು ಮಾಡುವುದರಿಂದಲೇ ವ್ಯವಸ್ಥೆ ಸರಿ ಆಗುತ್ತದೆಯೋ ಅಥವಾ ಈ ವ್ಯವಸ್ಥೆಯನ್ನು ಯಾವಾಗ ಸರಿ ಮಾಡುತ್ತೀರಿ ? ಹಳ್ಳಿಯಲ್ಲಿರತಕ್ಕಂಥ ಪರಿಸ್ಥಿತಿಯನ್ನು ಹಸನು ಮಾಡಲು ತಾವು ಏನಾದರೂ ಪಣ ತೊಟ್ಟಿದ್ದೀರೋ ಇಲ್ಲವೋ ? ಪಣ ತೊಡತಕ್ಕಂಥ ಆದ್ಯತೆ ಏನಾದರೂ ತಮಗೆ ಇದೆಯೋ ಇಲ್ಲವೋ ? ಈಗ ರೈತರು ಗೊಬ್ಬರದ ಬಗ್ಗೆ ಹೇಳಬೇಕಾದರೆ, ಗೊಬ್ಬರವನ್ನು ಡೀ ಕಂಟ್ರೋಲ್ ಮಾಡಿದ ಮೇಲೆ ರೈತರಿಗೆ ಬಹಳ ಕೆಟ್ಟ ಪರಿಸ್ಥಿತಿ ಆಗಿದೆ. ಅಮೇರಿಕಾದಂತಹ ದೇಶದಲ್ಲಿ ಗೊಬ್ಬರಕ್ಕೆ ಸಬ್ಸಿಡಿ ಕೊಡುತ್ತಾರೆ, ನಮ್ಮ ದೇಶದಲ್ಲಿ ಇಲ್ಲ ಅಂತ ಅಂದರೆ ನಾವು ಎಷ್ಟು ಮುಂದುವರಿದಿದ್ದೇವೆ ಸ್ವಾಮಿ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳುವುದಿಲ್ಲ. ಅದು ಕೇಂದ್ರ ಸರ್ಕಾರದ್ದು ಕೇಂದ್ರ ಸರ್ಕಾರದ್ದು ಎಂದು ಹೇಳುತ್ತೀರಿ. ಸಬ್ಸಿಡಿ ಬಂದರೆ ತಾವೇನು ಮಾಡುತ್ತೀರಿ ಎಂದರೆ ಕಂಪನಿಗಳಿಗೆ ಹಂಚುತ್ತೀರಿ. ಮಹಾರಾಷ್ಟ್ರ ಆಗಲಿ, ತಮಿಳುನಾಡು ಆಗಲಿ, ಆಂಧ್ರ ಆಗಲಿ ಸಬ್ಸಿಡಿಯನ್ನು ಸಹಕಾರ ಸಂಸ್ಥೆಗಳ ಮುಖಾಂತರ ಕೊಡುತ್ತಾರೆ. ಆದರೆ ನೀವಿಲ್ಲಿ 17 ಕೋಟಿ ರೂಪಾಯಿಗಳನ್ನು ಪ್ರೈವೇಟ್ ಕಂಪನಿಗಳಿಗೆ ಹಂಚಿಬಿಟ್ಟಿರಿ. ಈಗ 34ಕೋಟಿ ರೂಪಾಯಿಗಳು ಬಂದಿದೆ, ಅದಕ್ಕೆ ತಾವು ಯಾವ ವ್ಯವಸ್ಥೆ ಮಾಡುತ್ತೀರೋ ನಮಗೆ ಗೊತ್ತಿಲ್ಲ. ಅದನ್ನು ಸಹಕಾರ ಸಂಘಗಳ ಮುಖಾಂತರ ಹಂಚುತ್ತೀರೋ ಅಥವಾ ಪ್ರೈವೇಟ್ ಕಂಪನಿಗಳಿಗೆ ಈ 17 ಕೋಟಿ ರೂಪಾಯಿಗಳು ಕೊಟ್ಟಂತೆ ಕೊಟ್ಟು ಬಿಡುತ್ತೀರೋ ಎನ್ನುವುದನ್ನು ಕೂಡ ತಾವು ಹೇಳಬೇಕಾಗುತ್ತದೆ.

ಈ ಗೊಬ್ಬರದಿಂದ ಆರ್ಥಿಕ ಪರಿಸ್ಥಿತಿ ಮೇಲೆ ಎಷ್ಟು ಪರಿಣಾಮ ಆಗಿದೆ. ಇದರ ಬಗ್ಗ ಸರ್ಕಾರದ ನಿಲುವು ಸ್ಪಷ್ಟ ಇಲ್ಲ. ರೈತರಿಗೆ ಎಷ್ಟು ತೊಂದರೆ ಆಗಿದೆ. ಒಂದು ಕಡೆ ಕ್ರಿಮಿಕೀಟಗಳ ತೊಂದರೆ. ಇನ್ನೊಂದು ಕಡೆ ಗೊಬ್ಬರದ ತೊಂದರೆ ಗೊಬ್ಬರ ರೀ–ಕಂಟ್ರೋಲ್ ಆದ ಮೇಲೆ ಪರಿಸ್ಥಿತಿ ಬಹಳ

ಕೆಟ್ಟುಹೋಗಿದೆ. ಜನರ ಬೆಳೆ ಮೇಲೆ ಪರಿಣಾಮವಾಗಿದೆ. ಆರ್ಥಿಕ ಪರಿಸ್ಥಿತಿ ಮೇಲೆ ಪರಿಣಾಮ ಆಗಿದೆ. ಅಮೇರಿಕಾ ದೊಡ್ಡ ದೇಶ, ಮುಂದುವರಿದ ದೇಶ ಅಲ್ಲಿ ಸಬ್ಸಿಡಿ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ಏಕೆ ಇರಕೂಡದು. ಇದರ ಬಗ್ಗೆ ಸರ್ಕಾರದ ನೀತಿ ನಿರೂಪಣೆ ಏನೂ ಇಲ್ಲ. 17 ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟಿದ್ದನ್ನು ತಾವು ಕಂಪೆನಿಗಳಿಗೆ ಹಂಚಿದಿರಿ. ಆಂಧ್ರ, ಮಹಾರಾಷ್ಟ್ರ ರಾಜ್ಯಗಳವರು ಫೆಡರೇಷನ್ ಮುಖಾಂತರ ಕೊಟ್ಟಿದ್ದಾರೆ. ಇನ್ನು 34 ಕೋಟಿ ರೂಪಾಯಿಗಳು ನಿಮಗೆ ಬಂದಿದೆ. ಅದನ್ನೂ ಕೂಡ ಯಾವ ರೀತಿಯಲ್ಲಿ ಹಂಚುತ್ತೀರಿ, ತಮ್ಮ ನಿಲುವು ಏನು ? ಸಹಕಾರ ಸಂಘಗಳ ಮುಖಾಂತರ ಹಂಚುತ್ತೀರೋ ಅಥವಾ ಪ್ರೈವೇಟ್ ಕಂಪನಿಗಳ ಮುಖಾಂತರ ಹಂಚುತ್ತೀರೋ, ತಾವು ಇದರ ಬಗ್ಗೆ ನೋಡಬೇಕಾಗುತ್ತದೆ. ತಮ್ಮ ನೀತಿ ಸ್ಪಷ್ಟವಾಗಿರಬೇಕಾಗುತ್ತದೆ. ಏಕೆಂದರೆ ರೈತರಿಗೆ ಅನುಕೂಲವಾಗಬೇಕು. ಪ್ರೈವೇಟ್ ಕಂಪನಿಗಳಿಗೆ ತಮ್ಮ ಗೊಬ್ಬರ ಮಾರುವುದು ಒಂದೇ ಯೋಚನೆ ಇರುತ್ತದೆ.

ಸಹಕಾರ ಸಂಘಗಳು ಯಾರಿಗೆ ಬೇಕು, ಎಲ್ಲಿ ಬೇಕು, ಏನು ಪರಿಸ್ಥಿತಿ ಇದೆ ಎನ್ನುವುದನ್ನು ಬಹಳ ಮುಖ್ಯವಾಗಿದೆ. ಹೋದ ಸಾರಿ ನಾನು ಕೇಳಿದಾಗ, ಅದರ ಬಗ್ಗೆ ಡಿಟೇಲ್ ಮಾಹಿತಿ ಈಗಿಲ್ಲ. ಆಮೇಲೆ ಹೇಳುತ್ತೇನೆ ಎನ್ನುವ ಎಂಬ ಮಾತನ್ನು ಹೇಳಿದಿರಿ. ನಾವು ಅಗ್ರಿಕಲ್ಚರ್ ಬಗ್ಗೆ ನೀತಿ ನಿರೂಪಣೆ ಮಾಡಬೇಕಾಗಿದೆ. ಇವತ್ತಿನ ದಿವಸ ತೊಗರಿಬೇಳೆ ಹೋಗಿದೆ ರೈತರ ಕಷ್ಟ ಎಷ್ಟಾಗಿದೆ ? ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇದ್ದಿಲ್ಲ. ಸಾಯಂಕಾಲದೊಳಗೆ ಸ್ಟೇಟ್‌ಮೆಂಟ್ ಕೊಡಿಸುತ್ತೇನೆಂದು ಅಧ್ಯಕ್ಷರು ಹೇಳಿದರು. ಜೋಳದ ಬಗ್ಗೆ, 240 ರೂಪಾಯಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡಿದಿರಿ. ಇದನ್ನು ನಮ್ಮಲ್ಲಿ ಯಾರೂ ತೆಗೆದುಕೊಳ್ಳುತ್ತಿಲ್ಲ. ಹತ್ತಿಯ ಪರಿಸ್ಥಿತಿಯೂ ಅದೇ ರೀತಿ ಇದೆ. ಉದ್ದಿನ ಪರಿಸ್ಥಿತಿ, ಕುಸುಬೆ ಪರಿಸ್ಥಿತಿ ಅದೇ ರೀತಿ ಇದೆ. ಸನ್ ಫ್ಲವರ್, ಮೆಕ್ಕೆ ಜೋಳದ ಪರಿಸ್ಥಿತಿಯೂ ಅದೇ ಇದೆ. ಯಾರೂ ತೆಗೆದುಕೊಳ್ಳುವುದಿಲ್ಲ. ಇಂತಹವು ಎಷ್ಟು ಎಂದು ಹೇಳುತ್ತೀರಿ. ಯಾರು ಖರೀದಿ ಮಾಡುವವರು ? ಮಹಾರಾಷ್ಟ್ರ ಸರ್ಕಾರದವರು ಖರೀದಿ ಮಾಡುತ್ತಾರೆ, ನೀವು ಏಕೆ ಖರೀದಿ ಮಾಡುವುದಿಲ್ಲ ? ಸಪೋರ್ಟ್ ಪ್ರೈಸ್‌ನಲ್ಲಿ ನೀವೂ ಕೊಂಡುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು. ಒಂದು ಕಡೆ ರೈತರಿಗೆ ಅನುಕೂಲ ಮಾಡುವುದಕ್ಕೆ ಸಪೋರ್ಟ್ ಪ್ರೆಸ್ ಮಾಡಿದ್ದೇವೆಂದು ಅವತ್ತು ಹೇಳಿದಿರಿ. ಇವತ್ತಿಗೂ ಇದರ ಬಗ್ಗೆ ಉತ್ತರ ಹೇಳಲಿಲ್ಲ. ಮುಖ್ಯಮಂತ್ರಿಯವರು ಬಂದ ಮೇಲೆ ನಾನು ಹೇಳುತ್ತೇವೆಂದು ರಾಮಸ್ವಾಮಿಯವರು ಹೇಳಿದರು. ಇವತ್ತು ಮುಖ್ಯಮಂತ್ರಿಯವರು ಬಂದ ಮೇಲೂ ಈ ಮಾತು ಹೇಳಲಿಲ್ಲ. ಸಪೋರ್ಟ್ ಪ್ರೈಸ್ ಬಗ್ಗೆ ತಾವು ಏನು ನಿಲುವು ತೆಗೆದುಕೊಳ್ಳುತ್ತೀರಿ ಎಂದು ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. ಯಾವೊತ್ತು ನಿರ್ಣಯ ತೆಗೆದುಕೊಳ್ಳುತ್ತೀರಿ ? ಎಲ್ಲಾ ತೊಂದರೆಯಾಗಿ, ರೈತರು ಹಾಳಾಗಿ, ಬೀದಿಗೆ ಹೋದ ಮೇಲೆ ನೀವು ನಿರ್ಣಯ ತೆಗೆದುಕೊಳ್ಳುತ್ತೀರೋ ? ಅಥವಾ ಅವರು ಜೀವಂತ ಇದ್ದಾಗ ನಿರ್ಣಯ ತೆಗೆದುಕೊಳ್ಳುತ್ತೀರೋ ? ಇದರ ಬಗ್ಗೆ ತಾವು ಬಹಳ ಗಮನ ಕೊಡಬೇಕಾಗುತ್ತದೆ. ರೈತರ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಅವರು ಉದ್ಧಾರವಾಗಿ ಜೀವಂತವಾಗಿರಬೇಕಾದರೆ ನೀವು ಅವರೆಬೆಳೆ ಬೆಳೆಗಳಿಗೆ ಸಪೋರ್ಟ್ ಪ್ರೈಸ್ ಕೊಡಬೇಕು. ಮೊನ್ನೆ ನಾನು ಊರಿಗೆ ಹೋಗಿದ್ದಾಗ ಆಂಧ್ರದಿಂದ ಬಂದಿದ್ದಾರೆ, ಕೋಳಿಗೆ ಹಾಕುವುದಕ್ಕೆ ಜೋಳ ತೆಗೆದುಕೊಡಿ ಎಂದು. 60 ರೂಪಾಯಿ, 70 ರೂಪಾಯಿ 120 ರೂಪಾಯಿ ಮಾಡಿದ್ದಾರೆ. ಅವರ ಕಷ್ಟ ಎಷ್ಟಾಗಿರಬೇಕು ಹೇಳಿ ? 240 ರೂಪಾಯಿ ಎಂದು ಫಿಕ್ಸ್ ಮಾಡಿ ನೀವು ಮನೆಯಲ್ಲಿ ಕುಳಿತುಕೊಂಡು ಬಿಟ್ಟರೆ ಯಾರಿಗೆ ಅನುಕೂಲ ಸ್ವಾಮಿ ಇದು ? ಯಾರ ಉದ್ಧಾರದ ಸಲುವಾಗಿ ಇದು ? ಈ ನೀತಿ ಬಗ್ಗೆ ಸರ್ಕಾರದವರು ಗಮನವನ್ನು ಎಂದೆಂದೂ ಹರಿಸುವುದಿಲ್ಲ. ಏಕೆ ಇದರ ಬಗ್ಗೆ ಹೇಳುವುದಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ಏನಾದರೂ ನಿರ್ಣಯ ತೆಗೆದುಕೊಂಡು ಸಪೋರ್ಟ್ ಪ್ರೈಸ್ ಬಗ್ಗೆ ಆದೇಶ ಕೊಟ್ಟು

ಯಾರ ಮುಖಾಂತರ ಖರೀದಿ ಮಾಡಿಸುತ್ತೀರೋ ಮಾಡಿಸಿ. ಎರಡು ದಿವಸದಲ್ಲಿ ಹೇಳುತ್ತೇವೆಂದು ಹೇಳಿದ್ದರು. ಇವತ್ತಿನ ದಿವಸ ಮುಖ್ಯಮಂತ್ರಿಯವರು ಮಾತನಾಡುತ್ತಾರೋ ಏನೋ ಗೊತ್ತಿಲ್ಲ. ಆದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸಹಕಾರ ಸಂಸ್ಥೆಯಲ್ಲಿ ಬಡ್ಡಿ ಮನ್ನಾ ಮತ್ತು ಸಾಲ ಮನ್ನ ಬಗ್ಗೆ ನಾನು ವಿರೋಧ ಇದ್ದೇನೆ. ಏಕೆಂದರೆ ಇದು ಒಳ್ಳೆಯ ನೀತಿ ಅಲ್ಲ.ರೈತರ ಆರ್ಥಿಕ ಪರಿಸ್ಥಿತಿ ಮುಂದೆ ಬರತಕ್ಕಂಥ ನೀತಿ ಅಲ್ಲ. ಅವರನ್ನು ಸೋಮಾರಿಗಳನ್ನಾಗಿ ಮಾಡತಕ್ಕಂಥ ನೀತಿ ಅದು. ನಾವು ಶಹಭಾಸ್‌ಗಿರಿ ಪಡೆದುಕೊಳ್ಳುವುದಕ್ಕೆ ಮತ್ತು ಓಟು ತೆಗೆದುಕೊಳ್ಳುವುದಕ್ಕೆ ಹೇಳಬೇಕೇ ಹೊರತು ಇದನ್ನು ಯಾರೇ ಹೇಳಿದರೂ ತಪ್ಪು. ಉದಾಹರಣೆಗಾಗಿ ಹೇಳುವುದಾದರೆ 1983ರಲ್ಲಿ ಮನ್ನಾ ಮಾಡಿದರು. ಮೊದಲು ಏನು ಒಬ್ಬ ಸಾಲ ಮಾಡಿದ್ದ ಅವನು 83ರವರೆಗೂ ಹಾಗೆಯೇ ಉಳಿದ 1983ರಲ್ಲಿ ಮನ್ನಾ ಆದಾಗ ಅವನದೆಲ್ಲಾ ಹೋಯಿತು. ಪುನಃ 84ರಲ್ಲಿ ಸಾಲ ತೆಗೆದುಕೊಂಡ, ಹಾಗೆಯೇ ಕುಳಿತುಕೊಂಡ, 1986ರಲ್ಲಿ ಒಂದು ಸಾರಿ ಮನ್ನಾ ಆಯಿತು. ಪುನಃ 1986ರಲ್ಲಿ ಅವನಿಗೆ ಕ್ಲಿಯರ್ ಆಯಿತು. ಆದಮೇಲೆ 1987ರಲ್ಲಿ ಪುನಃ ಸಾಲ ತೆಗೆದುಕೊಂಡ ಮತ್ತು 89ರವರೆಗೆ ಹಾಗೇ ಕುಳಿತುಕೊಂಡ. 89ರಲ್ಲಿ ಮನ್ನಾ ಆಯಿತಲ್ಲಾ ಆಗ ಮತ್ತೆ ಅವನಿಗೆ ಮನ್ನಾ ಆಯಿತು. ಇದು ಯಾರಿಗೆ ಲಾಭ ಆಗುತ್ತದೆಂದರೆ, ಯಾರು ಭಂಡರಿದ್ದಾರೆ, ಯಾರು ಕೊಡುವುದಿಲ್ಲ, ಅಂಥವರಿಗೆ ಲಾಭ. ಯಾರು ಸರಿಯಾಗಿ ಕೊಡುತ್ತಾರೋ ಅವನಿಗೆ ಅನುಕೂಲ ಇಲ್ಲ. ಕೊಟ್ಟವನಿಗೆ ಏಕೆ ಅನುಕೂಲವಾಗಬಾರದು ? ಕೊಟ್ಟವನಿಗೆ ಏನು ಕೊಟ್ಟಿದ್ದೀರಿ ? ಯಾರು ಸಾಲವನ್ನು ರೆಗ್ಯುಲರಾಗಿ ಮರುಪಾವತಿ ಮಾಡುತ್ತಾನೋ ಅವನಿಗೆ ಏನಾದರೂ ಪ್ರೈಸ್ ಇಟ್ಟಿದ್ದರೆ ಅವರಿಗೆ ಏನಾದರೂ ಸಹಾಯ ಸಿಕ್ಕಿದೆಯೇ ಎಂದರೆ ಇಲ್ಲ. ಅವನ ಮೇಲೆ ಪುನಃ ಒತ್ತಾಯ. ಯಾರು ಸಾಲ ಕೊಡುವುದಿಲ್ಲವೋ ಅವನಿಗೆ ಮನ್ನಾ. ಇದು ಸರಿಯಾದ ವ್ಯವಸ್ಥೆಯಲ್ಲ. ಇದರ ಜೊತೆಯಲ್ಲಿ ಸಂಪೂರ್ಣವಾದ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸಂಪೂರ್ಣ ಸಾಲ ಕೊಡಬೇಕಾದರೆ ನಬಾರ್ಡ್ ನೀತಿ ಬದಲಾವಣೆ ಮಾಡಬೇಕಾಗುತ್ತದೆ. ನಬಾರ್ಡ್ ನೀತಿ ಬದಲಾವಣೆ ಮಾಡಬೇಕಾದರೆ ಸರ್ಕಾರದವರು ಅದಕ್ಕೆ ಹೇಳಬೇಕು. ನಬಾರ್ಡ್ ನೀತಿ ಹೇಗೆ ಬದಲಾಯಿಸಬೇಕು ? ರೈತ 10 ಎಕರೆಯಲ್ಲಿ ಕಬ್ಬು ಬೆಳೆದರೆ ಅವನಿಗೆ 10 ಎಕರೆಗೂ ಸಾಲ ಕೊಡುವುದಿಲ್ಲ. ಕೊಡುವುದೇ 2 ಎಕರೆಗೆ 2500 ರೂಪಾಯಿ ಒಂದು ಎಕರೆಗೆ ಕೊಡುತ್ತೀರಿ. 200 ರೂಪಾಯಿ ಜೋಳಕ್ಕೆ, 300 ರೂಪಾಯಿ ಹತ್ತಿಗೆ – ಹೀಗೆ ಟೆಕ್ನಿಕಲ್ ಕಮಿಟಿ ರಿಪೋರ್ಟ್ ಪ್ರಕಾರ ನೀವು ಕೊಡುತ್ತಿದ್ದೀರಿ. 50 ಎಕರೆ ಇದ್ದವರಿಗೆ 50 ಎಕರೆಗೂ ನೀವು ದುಡ್ಡು ಕೊಡುವುದಿಲ್ಲ. ಏಕೆ ಕೊಡುವುದಿಲ್ಲ ? ಇದಕ್ಕೆ ಕಾರಣ ಏನು ? ಮಿನಿಮಂ ಇನ್‌ವಾಲ್ವ್‌ಮೆಂಟ್ ಡಿಸಿಸಿ ಬ್ಯಾಂಕ್‌ಗೆ ಇರುವುದರಿಂದ ತೊಂದರೆಯಾಗುತ್ತದೆ.

ಆದ್ದರಿಂದ ಈ ನೀತಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಈ ನೀತಿ ಬದಲಾವಣೆ ಮಾಡಬೇಕಾದರೆ ತಾವು ಕೇಂದ್ರ ಸರ್ಕಾರಕ್ಕೆ ಬರೆಯಬೇಕು. ಮಿನಿಮಂ ಇನ್‌ವಾಲ್ವ್‌ಮೆಂಟ್ ಏನಿದೆ. ಅದು 40 ಪರ್‌ಸೆಂಟ್ ಆಗಲೀ ಅಥವಾ 40 ಪರ್‌ಸೆಂಟ್‌ಗೆ ಓನ್ ಫಂಡ್ ಹಾಕಬೇಕಾಗುತ್ತದೆ. ಯಾವುದೇ ಜಿಲ್ಲಾ ಬ್ಯಾಂಕ್ ಆಗಲೀ, ಅಪೆಕ್ಸ್ ಬ್ಯಾಂಕ್ ಆಗಲೀ ಕೊಡಬೇಕಾದರೆ 40 ಪರ್‌ಸೆಂಟ್‌ನಷ್ಟು ಓನ್ ಫಂಡ್. ಸ್ವತಃ ದುಡ್ಡು ಕೊಟ್ಟು, 60 ಪರ್‌ಸೆಂಟ್ ನಬಾರ್ಡ್ ಕೊಡಬೇಕು. ಅದರಲ್ಲಿ 7 ಪರ್‌ಸೆಂಟ್ ಬಡ್ಡಿಯನ್ನು ನಾವು ರೈತರಿಗೆ ಕೊಡಬೇಕಾಗುತ್ತದೆ. 13 ಪರ್‌ಸೆಂಟ್‌ನಷ್ಟು ಡಿಪಾಸಿಟ್ ಇಟ್ಟುಕೊಂಡು ಇಷ್ಟು ಕೊಡಬೇಕಾಗುತ್ತದೆ ಅಂದರೆ ನಮಗೆ ಎಷ್ಟು ಲುಕ್ಸಾನಿದೆ, ಅದಕ್ಕಾಗಿ ಯಾವ ಬ್ಯಾಂಕುಗಳೂ ಇದನ್ನು ಒಪ್ಪುವುದಿಲ್ಲ. ಇದಕ್ಕೆ ಈ ನೀತಿ ನಿರೂಪಣೆ ಬದಲಾಯಿಸುವುದಕ್ಕಾಗಿ ತಾವು ಕೇಂದ್ರ ಸರ್ಕಾರಕ್ಕೆ ಬರೆದು ಅದನ್ನು ಬದಲಾವಣೆ ಮಾಡಬೇಕು. ಆಗ ಮಾತ್ರ ರೈತನಿಗೆ ಸಂಪೂರ್ಣ ಸಾಲ ಕೊಟ್ಟು ಅವನ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ತಾವುಗಳು ಏನಾದರೂ ಮಾಡಿ ಈ ಒಂದು ವ್ಯವಸ್ಥೆಯನ್ನು ನಿರೂಪಣೆ

ಮಾಡಿ, ನೀತಿ ರೂಪಣೆಯನ್ನು ಬದಲಾಯಿಸಿದರೆ ರೈತರ ಆರ್ಥಿಕ ಪರಿಸ್ಥಿತಿಯು ಮುಂದೆ ಸಹಕಾರ ಸಂಸ್ಥೆಗಳ ಮೂಲಕ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ರೀತಿಯ ಯೋಜನೆಗಳು ನಮ್ಮಲ್ಲಿವೆ, ಆದರೆ ಅಡ್ಡಿ ಅಡಚಣೆಗಳು ಎಲ್ಲಿವೆ ? ಸರಕಾರದ ಸಹಾಯ ಏತಕ್ಕಾಗಿ ಬೇಕೆಂದರೆ ಕೇಂದ್ರ ಸರಕಾರವನ್ನು ಕೇಳಿ, ಇರುವ ನೀತಿಯನ್ನು ಬದಲಾಯಿಸಬೇಕು. ಇದನ್ನು ಬಿಟ್ಟು ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುವುದು ಸರಿಯಲ್ಲ. ಅದನ್ನು ಸರಿಪಡಿಸಬೇಕು. ಆದರೆ ಇರುವ ವ್ಯವಸ್ಥೆಯನ್ನು ಸರಿಪಡಿಸಬೇಕು. ಒಂದು ವೇಳೆ ಆ ಸಹಕಾರ ಸಂಸ್ಥೆಗಳಲ್ಲಿ ಯಾರು ಕೆಟ್ಟವರಿದ್ದಾರೆ, ಅವರಿಗೆ ಏನು ಶಿಕ್ಷೆ ಕೊಡಬಯಸುತ್ತೀರೋ ಅದನ್ನು ಕೊಡಿ ಅಥವಾ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತೀರೋ ಅದನ್ನು ಮಾಡಿ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅದನ್ನು ಖಂಡಿತ ಒಪ್ಪುತ್ತೇನೆ. ಆದರೆ ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರೋತ್ಸಾಹಧನವನ್ನು ಕೊಡಬೇಕು. ತಾವು ಬೇರೆ ಡಿಪಾರ್ಟ್‌ಮೆಂಟ್‌ಗೆ ಹೋಲಿಕೆ ಮಾಡಿ ನೋಡಿದಾಗ ಸಹಕಾರ ಸಂಘಗಳಲ್ಲಿ ಎಷ್ಟು ಪರ್‌ಸೆಂಟ್ ಸೋರಿಕೆ ಆಗಿದೆ ಎಂದು ಹೇಳುತ್ತೀರಾ ? ಅದನ್ನು ಪರಿಶೀಲಿಸಿದರೆ ಅದು 6 ಪರ್‌ಸೆಂಟ್‌ನಷ್ಟು ಕೂಡ ಬರುವುದಿಲ್ಲ. ಇಷ್ಟಿದ್ದರೂ ಕೂಡ ಸಹಕಾರಿಗಳೆಲ್ಲರೂ ಕೆಟ್ಟವರು ಎಂದು ಹೇಳುವುದು ಸರಿಯಲ್ಲ. ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟೆಷ್ಟು ಸೋರಿ ಹೋಗಿದೆ ಎಂಬ ಬಗ್ಗೆ ಪತ್ತೆ ಹಚ್ಚಿ. ಸಹಕಾರಿ ವಲಯದಲ್ಲಿ ಹೀಗೆ ಆಗಿದ್ದರೂ ಅದನ್ನು ಪತ್ತೆ ಹಚ್ಚಿ ತಪ್ಪಿತಸ್ಥರನ್ನು ಶಿಕ್ಷಿಸಿ, ಬೇಡಿ ಎಂದು ಹೇಳುವುದಿಲ್ಲ. ಆದರೆ ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಹಕಾರ ನೀಡಬೇಕು. ಹೀಗೆ ಮಾಡಿದರೆ ಅದರಿಂದ ಚೆನ್ನಾದ ವ್ಯವಸ್ಥೆಯು ಬರುತ್ತದೆ. ಈ ಒಂದು ಮಹತ್ವದ ಕಾರ್ಯವನ್ನು ಸರಕಾರದವರು ಹೇಗೆ ಮಾಡಬೇಕೆಂಬುದನ್ನು ನೋಡಬೇಕು. ಒಟ್ಟಿನಲ್ಲಿ ನೀತಿ ನಿರೂಪಣೆಯನ್ನು ಬದಲಾಯಿಸಬೇಕು. ಈಗ ಬಡ್ಡಿ ವಿಚಾರ. ಈ ವಿಚಾರದಲ್ಲಿ ಕೇಂದ್ರ ಸರಕಾರದವರಿಗೆ ನಮ್ಮ ಸರಕಾರದವರು ತಿಳಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಈ ಮೂಲಕ ಸಣ್ಣ ಸೊಸೈಟಿಗಳು ಏಕೆ ಹಾಳಾಗುತ್ತಾ ಇವೆ ? ಒಬ್ಬ ಸಣ್ಣ ರೈತರು ಒಂದು ಸಾವಿರ ರೂಪಾಯಿಗಳ ಸಾಲವನ್ನು ತೆಗೆದರೆ ಬಡ್ಡಿ ಇನ್ನೂರು ರೂಪಾಯಿಗಳು ಆಗುತ್ತದೆ. ಅವರು ವಸೂಲು ಮಾಡಿ ಜಿಲ್ಲಾ ಬ್ಯಾಂಕ್‌ಗೆ ಕಟ್ಟುವಾಗ ಏನು ಮಾಡುತ್ತಾರೆ ಅಂದರೆ ಬಡ್ಡಿ ಹಣ ಸೇರಿ 1200 ರೂಪಾಯಿಗಳನ್ನು ಮೂಲದಲ್ಲಿಯೇ ತೆಗೆದುಕೊಳ್ಳುತ್ತಾರೆ. ಹಾಗಾದರೆ ಅವನ ಗತಿ ಏನಾಗಬೇಕು ? ಈ ನಿಯಮಗಳು ಹೋಗಿ, ಅಸಲಿಗೆ ಅಸಲು, ಬಡ್ಡಿಗೆ ಬಡ್ಡಿ ತೆಗೆದುಕೊಂಡರೆ ಈ ವ್ಯತ್ಯಾಸ ಬರುವುದಿಲ್ಲ. ಜಿಲ್ಲಾ ಬ್ಯಾಂಕ್‌ಗಳು ಹಳ್ಳಿಗಳ ಸೊಸೈಟಿಗಳಿಗೆ 220 ಕೋಟಿ ಸಾಲ ಕೊಟ್ಟರೆ 43 ಕೋಟಿ ವ್ಯತ್ಯಾಸವಿದೆ. ಆ ವ್ಯತ್ಯಾಸ ಹೇಗೆ ಹೋಗುತ್ತದೆ ? ಎಲ್ಲಿ ತಪ್ಪಾಗಿದೆ ? ಈ ಬಡ್ಡಿಯ ಲೆಕ್ಕದಲ್ಲಿ ಹೇಳುವುದಾದರೆ, ಕೆಲವು ಕಡೆಗಳಲ್ಲಿ ತಿಂದು ಹೋಗಿದೆ ಕೆಲವು ಕಡೆಗಳಲ್ಲಿ ಸಂಬಳದ ಲೆಕ್ಕ ಹಾಕಿದ್ದಾರೆ. ಅದಕ್ಕಾಗಿ ಅಲ್ಲಿರತಕ್ಕ ಕಾರ್ಯದರ್ಶಿಯವರು ಆದರ ಬಗ್ಗೆಯೂ ಒಂದು ನೀತಿಯನ್ನು ನಿರೂಪಣೆ ಮಾಡಬೇಕಾಗಿದೆ. ಅದನ್ನು ಯಾವ ಪ್ರಕಾರವಾಗಿ ಮಾಡಬೇಕು ? ಈ ಬಗ್ಗೆ ಮತ್ತು ಇತರ ವಿಷಯಗಳ ಬಗ್ಗೆ ಮಾನ್ಯ ಅಜ್ಜೀಬಾಳ್ ಕಮಿಟಿಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ತಾವು ಅಮಲ್‌ಬಜಾವಣೆ ತರಬೇಕು. ಈ ತರಹ ಮಹಾರಾಷ್ಟ್ರದಲ್ಲಿ ಕೆಲವು ಕಡೆಗಳಲ್ಲಿ ಜಾರಿಯಲ್ಲಿದೆ. ಹೀಗೆ 43 ಕೋಟಿ ರೂಪಾಯಿಗಳು ಏಕೆ ನಷ್ಟವಾಗುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ. ಸೆಕ್ರೆಟರಿಗಳು ಈ ವಿಚಾರದಲ್ಲಿ ಎಲ್ಲಾ ಕಡೆಗಳಲ್ಲಿಯೂ ಪ್ರತಿಭಟನೆ ಮಾಡುವಾಗ ನಾವು ಹೇಳಿದ್ದು ನಿಜ ಎಂದು 25 ಸಾವಿರ ಸೊಸೈಟಿಗಳು ಇವೆ, 15 ಸಾವಿರ ವರ್ಕಿಂಗ್‌ನಲ್ಲಿ ಇವೆ. ಅಲ್ಲಿಗೆ 34 ಕೋಟಿ ಸಂಬಳ ಆಯಿತು. ಇದರಲ್ಲಿ ಸರಕಾರದವರು 17 ಕೋಟಿಗಳನ್ನಾದರೂ ಕೊಟ್ಟು, 25 ಪರ್‌ಸೆಂಟ್ ಅಪೆಕ್ಸ್ ಬ್ಯಾಂಕ್, 15 ಪರ್‌ಸೆಂಟ್ ಡಿಸಿಸಿ ಬ್ಯಾಂಕ್, 10 ಪರ್‌ಸೆಂಟ್ ಸೊಸೈಟಿಯವರು ಕೊಡಬೇಕೆಂದು ಈ ಪ್ರಕಾರವಾಗಿ ಮಾಡಿ. ಅಪೆಕ್ಸ್ ಬ್ಯಾಂಕ್‌ನವರು ತಿಂಗಳಿಗೆ ನಾಲ್ಕೈದು ಕೋಟಿ ಲಾಭ ಮಾಡುತ್ತಾರೆ ಎಂದು ಕೇಳುವುದು

ನಿಜ. ಅದಕ್ಕೆ ಒಂದು ಫಂಡ್‌ನ್ನು ಕ್ರಿಯೇಟ್ ಮಾಡಿ ಅದರ ಬಡ್ಡಿಯಲ್ಲಿ ಸಂಬಳವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಹೀಗೆ ನಮ್ಮ ಸಹಕಾರಿ ಸಂಸ್ಥೆಗಳು ಚೆನ್ನಾಗಿ ನಡೆದು ಮುಂದು ಬರಬೇಕಾದರೆ ನಮ್ಮಲ್ಲಿರುವ ನೀತಿ ನಿಯಮಗಳನ್ನು ಅವಶ್ಯಕವಾದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ನಮ್ಮದು ಬಹಳ ಕೊನೆಯ ತಾಲ್ಲೂಕು. ನನ್ನ ಹೆಸರು ಎಲ್ಲಕ್ಕಿಂತ ಮೊದಲು. ಒಂದನೇ ಕ್ಷೇತ್ರ. ಆದರೆ ಎಲ್ಲಕ್ಕಿಂತ ಕೆಳಗಿದ್ದೇನೆ. ನಮ್ಮನ್ನು ಯಾರೂ ನೋಡುವುದಿಲ್ಲ.

ಬ್ಯಾಂಕ್ ಚೇರ್‌ಮನ್ ಬೇರೆ, ನಮ್ಮನ್ನು ಯಾರು ಕೇಳುವರರು ಇಲ್ಲ. ನಾವು ಇದ್ದೇವೆ ಎಂದು ಸರ್ಕಾರದವರು ಒಂದು ಮಾತು ಹೇಳುವುದಿಲ್ಲ. ಅವರಿಗೆ ಅವರದೇ ತೊಂದರೆಯಾಗಿದೆ. ಅದನ್ನು ಸರಿಪಡಿಸಿಕೊಳ್ಳುವುದೇ ಕಷ್ಟವಾಗಿದೆ. ಈಗ ಯಾರು ಯಾರು ರಾಜೀನಾಮೆ ಕೊಡುತ್ತಾರೋ ಏನೇನೋ ಆಗಿದೆಯೋ. ನನ್ನದು ಒಂದು ಸಲಹೆ ಇದೆ. ಅದೇನೆಂದರೆ, ಮಂತ್ರಿಗಳಿಗೆ ತೊಂದರೆಯಾಗಿದ, ಮಂತ್ರಿಗಳಿಗೆ ಮನೆ ಇಲ್ಲ, ಕಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಯಾರು ಕೇಳದೆ ನೀವು ಎಂ.ಎಲ್.ಎ. ಆಗಿದ್ದೀರಾ. ಯಾರನ್ನು ಕೇಳದೆ ಮಾರ್ಕೆಟಿಂಗ್ ಫೆಡರೇಷನ್ ಚೇರ್‌ಮನ್ ಆಗಿದ್ದೀರಾ, ಯಾರೂ ಕೇಳದೆ ಅಫೆಕ್ಸ್ ಬ್ಯಾಂಕ್ ಚೇರ್‌ಮನ್ ಆಗಿದ್ದೀರಾ, ಸುಮಾರು 200 ಕೋಟಿ ರೂಪಾಯಿಗಳನ್ನು ಸಾಲ ಕೊಡುತ್ತೇವೆಂದು ಹೇಳಿದರೆ ನಿಮ್ಮನ್ನು ಎಲ್ಲರೂ ಕೇಳುತ್ತಾನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಹಾಗೆ ಜನ ಕೇಳಿದ್ದಾರೆಂದು ಹೇಳಿದೆ. ನಮ್ಮ ಕ್ಷೇತ್ರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲವೆಂದು 5 ವರ್ಷಗಳಿಂದ ಹೇಳುತ್ತಿದ್ದೇನೆ. ಯಾರೊಬ್ಬರು ಕೇಳುವುದಿಲ್ಲ 20 ಕೋಟಿ ರೂಪಾಯಿಗಳು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಈಗ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ನೀರು ಇಲ್ಲ, ಅದಕ್ಕೆ ಯಾರೂ ಕೇಳಿಲ್ಲ ಎನ್ನುವಂತಹ ಅಪಾದನೆ ಸರಿಯಲ್ಲ. ಅವರಿಗೆ ಗೊತ್ತಿದೆ ಪೈಪ್ಡ್‌ವಾಟರ್ ಸಪ್ಲೈನಲ್ಲಿ ಅವರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಸುಮಾರು 30–35 ಹಳ್ಳಿಗಳಿಗೆ ಸರ್ಕಾರ ಹಣವನ್ನು ಖರ್ಚು ಮಾಡಿ ಕೊಟ್ಟಿದೆ. ಇನ್ನೂ ಕೂಡ ಏನು ಮಾಡಿಲ್ಲ ಎಂದ ಹೇಳುವುದು ಸರಿಯಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಸಭಾಧ್ಯಕ್ಷರೇ, 30 ಹಳ್ಳಿಗಳಿಗೆ ಸರ್ಕಾರ ಹಣ ಖರ್ಚು ಮಾಡಿದೆ ಸಂತೋಷ, ಆದರೆ ಅದರಲ್ಲಿ ನೀರೇ ಇಲ್ಲ. ಬಾವಿಯಲ್ಲಿ ನೀರೇ ಇಲ್ಲ ಕೊಳವೆ ಇದೆ, ಟ್ಯಾಂಕ್ ಇದೆ, ಭಾರಿ ದೊಡ್ಡ ಟ್ಯಾಂಕ್ ಮತ್ತು ಹತ್ತುವುದಕ್ಕೆ ಮೆಟ್ಟಲು ಇದೆ, ನೀರು ಮಾತ್ರ ಇಲ್ಲ. ಅದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ದಪ್ಪ ದಪ್ಪ ಕೊಳವೆಗಳೇ ಇವೆ, ನೀರೇ ಇಲ್ಲ. ಅದನ್ನು ತೆಗೆದುಕೊಂಡು ಏನು ಮಾಡುವುದು. ಅದಕ್ಕೆ ಏನು ವ್ಯವಸ್ಥೆ ಮಾಡುತ್ತಿರಿ, ಈ ನೀರಿನ ವ್ಯವಸ್ಥೆಯ ಬಗ್ಗೆ ಪ್ರತಿಯೊಂದು ಸಾರಿಯೂ ನಾನು ಹೇಳುತ್ತಿದ್ದೇನೆ. ನಾನು ಹೋದ ಸಾರಿಯೂ ಹೇಳಿದ್ದೆ. ಕೆಲವು ಲಂಬಾಣಿ ತಂಡಗಳಲ್ಲಿ 5 ಕಿಲೋಮೀಟರ್ ದೂರದಿಂದ ನೀರು ತಂದು ಮಂಚದ ಮೇಲೆ ಕುಳಿತುಕೊಂಡು ಕೆಳಗೆ ಬುಟ್ಟಿ ಇಟ್ಟು ಸ್ನಾನ ಮಾಡಿ ಕೆಳಗಿನ ಬುಟ್ಟಿಯಲ್ಲಿರುವ ನೀರಿನಲ್ಲಿ ಬಟ್ಟೆ ಒಗೆಯುತ್ತಾರೆ. ಈ ಒಂದು ಪರಿಸ್ಥಿತಿಯಲ್ಲಿ ಎಷ್ಟು ಕಷ್ಟವಿರಬಹುದು. ಈ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ ಇದನ್ನು ಯಾವಾಗ ಸರಿಪಡಿಸುತ್ತೀರಿ. ಆದಷ್ಟು ಬೇಗ ಈ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಇನ್ನು ಮಂತ್ರಿಗಳಿಗೆ ತೊಂದರೆಯಾಗಿದೆ, ಇದು ಯಾವಾಗ ಪರಿಹಾರವಾಗುತ್ತದೆ ಎಂದರೆ ಈಗ 41 ಜನ ಮಂತ್ರಿಗಳು ಇದ್ದಾರೆ. ಅವರಿಗೆ ಕಾರು ಇಲ್ಲ, ಅವರು ಬಾಡಿಗೆ ಕಾರು ತಂದಿದ್ದಾರೆ. ಶ್ರೀ ಧರ್ಮಸಿಂಗ್ ಅವರಿಗೆ ಮೊನ್ನೆ ಹೇಳಿದ್ದೆ. ಒಂದು ಹಾಸ್ಟೆಲ್ ಕಟ್ಟಿರಿ, ಹಾಸ್ಟೆಲ್ ಕಟ್ಟಿದರೆ ಎಲ್ಲಾ ಮಂತ್ರಿಗಳು ಒಂದು ಕೆರೆ ಇರುತ್ತಾರೆ ಒಂದು ಬಸ್ಸು ಮಾಡಿದರೆ

ಎಲ್ಲರಿಗೂ ಹೋಗುವುದಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದೆ. ಬಾಡಿಗೆ ಕಾರು ಏಕೆ ಬೇಕು.

ಶ್ರೀ ವಾಟಾಳ್ ನಾಗರಾಜ್:– ನಿಮಗೆ ಸಹಕಾರ ಸಚಿವರ ಬೆಂಬಲ ಇದೆ ತಾನೆ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇದೆ, ನಾನು ಅದು ಹೇಳುತ್ತಿಲ್ಲ. ಬಹಳ ಸಚಿವರಿಗೆ ಮನೆ ಇಲ್ಲದೆ ತೊಂದರೆಯಾಗಿದೆ. ಕಾರುಗಳನ್ನು ಬಾಡಿಗೆಗೆ ತಂದಿದ್ದಾರೆ. ಒಂದು ಒಳ್ಳೆಯ ಹಾಸ್ಟೆಲ್ ಕಟ್ಟಿ. ಈಗ 40–50 ಜನ ಇದ್ದಾರೆ ಇನ್ನು, 10 ಜನ ಮಂತ್ರಿಗಳು ಆಗಬಹುದು. ಒಂದು ದೊಡ್ಡ ಹಾಸ್ಟೆಲ್ ಕಟ್ಟಿ, ಎಲ್ಲಾ ಮಂತ್ರಿಗಳು ಒಂದು ಕಡೆ ಇದ್ದರೆ ಬಂದು ಹೋಗುವವರಿಗೆ ಅನುಕೂಲವಾಗುತ್ತದೆ. ಅವರು ಅಲ್ಲಿ ಇಲ್ಲಿ ಮನೆಗಳನ್ನು ಹುಡುಕಿಕೊಂಡು ಹೋಗುವುದು ತಪ್ಪುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ವರ್ಕಿಂಗ್ ವುಮೆನ್ ಹಾಸ್ಟೆಲ್ ಇದ್ದ ಹಾಗೆ ವರ್ಕಿಂಗ್ ಮಿನಿಸ್ಟರ್ಸ್ ಹಾಸ್ಟೆಲ್ ಎಂದು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್:– ಎಲ್ಲಿ ಮಾಡುವುದು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಬೆಂಗಳೂರಿನಲ್ಲಿ ಎಲ್ಲಾದರೂ ಚೆನ್ನಾಗಿ ಇರುವ ಜಾಗ, ಜನ ಬರುವುದಕ್ಕೆ ಅನುಕೂಲ ಆಗಬೇಕು. ಅಂತಹ ಕಡೆ ಮಾಡಿ. ಇಲ್ಲಿಂದ ಒಂದು ಬಸ್ಸು ಮಾಡಬೇಕು, ಹೋಗುವುದಕ್ಕೆ ಬರುವುದಕ್ಕೆ. ಈ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡಿ, ಮುಖ್ಯ ಮಂತ್ರಿಗಳು ವಿಚಾರ ಮಾಡಬೇಕಾಗುತ್ತದೆ. ಈ ರೀತಿ ಮಾಡಿದರೆ ಮಂತ್ರಿಗಳಿಗೆ ತೊಂದರೆ ತಪ್ಪುತ್ತದೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಸಚಿವರಿಂದ ಹೇಳಿಕೆ

ರೈತ ಸಂಘದ ಸದಸ್ಯರ ದಸ್ತಗಿರಿ

† ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತಿದ್ದೇನೆ. ಡಂಕಲ್ ಒಪ್ಪಂದವನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘವು ಮಾರ್ಚ್ 3 ಮತ್ತು 4 ರಂದು ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಮತ ಪ್ರದರ್ಶನ ನಡೆಸಲು ಕರೆ ನೀಡಿದೆ. ಬೆಂಗಳೂರು, ಮಂಡ್ಯ, ಕೊಡಗು, ಗುಲ್ಬರ್ಗ, ರಾಯಚೂರು ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಸುಮಾರು 15 ಸಾವಿರ ಜನ ರೈತರು ಈ ರ್ಯಾಲಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು ದಿನಾಂಕ 27–3–93ರಂದು ರಾಯಚೂರು, ಬೆಳಗಾಂ, ಗುಲ್ಬರ್ಗಾ, ಮೈಸೂರು ಮತ್ತು ಮಂಗಳೂರುಗಳಿಂದ ದೊಡ್ಡ ಪ್ರಮಾಣದಲ್ಲಿ ರೈತರು ರೈಲ್ವೆ ಪ್ರವಾಸ ಮಾಡಲು ಬರತೊಡಗಿದರು. ಇವರು ಟಿಕೆಟು ಹೊಂದಿರಲಿಲ್ಲವಾದ್ದರಿಂದ ಪ್ರವಾಸ ಮಾಡಲು ರೈಲ್ವೆಯವರು ಅವಕಾಶ ಕೊಡಲಿಲ್ಲ. ಅದೇ ದಿನ ಸುಮಾರು 2500 ರೈತರು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಜಮಾಯಿಸಿ ನಂತರ ರೈಲ್ವೆ ಅತಿಥಿ ಗೃಹಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಅಲ್ಲಿ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, ಮಂಡ್ಯ ಜಿಲ್ಲೆಯ ರೈತ ಸಂಘದ ನಾಯಕರು ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ರೈತರೆಲ್ಲರೂ ರೈಲ್ವೆ ಸಚಿವರ ಮನೆಗೆ ಹೋಗಿ ತಮಗೆ ಪ್ರವಾಸ ಮಾಡಲು ಸ್ಥಳಾವಕಾಶ ನೀಡುವವರೆಗೆ ಧರಣಿ ಮಾಡಬೇಕೆಂದು ಕೇಳಿದರು. ಒಂದು ವೇಳೆ ಪೊಲೀಸರು ದಸ್ತಗಿರಿ ಮಾಡಿದರೆ ರೈತರು ತಮ್ಮ ಸ್ಥಳಗಳಿಗೆ ಹೋಗಿ ರಸ್ತೆ ತಡೆ ಚಳುವಳಿ ನಡೆಸಬೇಕೆಂದು ಹೇಳಿದರು. ಈ